# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 22, 2021

ಸಂಪುಟ : 48 ಸಂಚಿಕೆ : 39 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




ಯೋಗ ಕಾರ್ಯಕ್ರಮದಲ್ಲಿ ವೈದ್ಯಗುರು ಚನ್ನಬಸವಣ್ಣ ಅವರೊಂದಿಗೆ ಸಂಸದ ಜಿ.ಎಂ. ಸಿದ್ದೇಶ್ವರ, ಪತ್ನಿ ಗಾಯತ್ರಿ ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ರಿಷ್ಯಂತ್ ಸೇರಿದಂತೆ ಇತರರು ಯೋಗಾಸನ ಮಾಡಿದರು.

## ನಿರಂತರ ಯೋಗಾಭ್ಯಾಸಕ್ಕೆ ಸಂಸದ ಸಿದ್ದೇಶ್ವರ ಕರೆ

ದಾವಣಗೆರೆ, ಜೂ.21- ಆರೋಗ್ಯವನ್ನು ಕಾಪಾಡಿ ಕೊಳ್ಳುವ ನಿಟ್ಟಿನಲ್ಲಿ ಯೋಗ ಪ್ರಮುಖ ಪಾತ್ರ ವಹಿಸುತ್ತದೆ. ನಿರಂತರ ಯೋಗಾಭ್ಯಾಸದಿಂದ ಉಸಿರಾಟ ಸರಾಗವಾಗುತ್ತದೆ. ಕೊರೊನಾದಂತಹ ಸಂಕಷ್ಟದ ಸಮಯದಲ್ಲಿ ಪ್ರತಿಯೊಬ್ಬರೂ ಯೋಗಾಸನದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕು ಎಂದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ವರದಿಗಾರರ ಕೂಟ ಹಾಗೂ ಜಿಲ್ಲಾ ಯೋಗ ಒಕ್ಕೂಟದ ಆಶ್ರಯದಲ್ಲಿ ಇಂದು ನಗರದ ಜಿ.ಎಂ.ಐ.ಟಿ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿಯವರು ಯೋಗಾಸನದ ಮಹತ್ವವನ್ನು ಇಡೀ ವಿಶ್ವಕ್ಕೇ ಅರ್ಥೈಸಬೇಕು ಎಂಬ ಮುಂದಾಲೋಚನೆಯಿಂದ ಯೋಗ ದಿನಾಚರಣೆ ಬಗ್ಗೆ ಮನವರಿಕೆ ಮಾಡಬೇಕು ಎಂಬ ಹಿನ್ನೆಲೆಯಲ್ಲಿ ಏಳು ವರ್ಷಗಳ ಹಿಂದೆ ಜೂನ್ 21 ಅಂತರರಾಷ್ಟ್ರೀಯ ಯೋಗ ದಿನಾಚರಣೆ ಎಂದು ಘೋಷಣೆ ಮಾಡಿದ್ದು, ಅನೇಕ (3ನೇ ಪುಟಕ್ಕೆ)

### 2-3 ದಿನಗಳಲ್ಲಿ ಜಿಲ್ಲೆ ಅನ್‌ಲಾಕ್: ಸಂಸದ ವಿಶ್ವಾಸ

**ಜಿಲ್ಲೆಯಲ್ಲಿ ಕೊರೊನಾ ಸೋಂಕಿನ ಪ್ರಮಾಣ ಶೇ.5 ಕ್ಕಿಂತ ಹೆಚ್ಚಿರುವುದರಿಂದ ಲಾಕ್‌ಡೌನ್ ಅನ್ನು ಮುಂದುವರೆಸಲಾಗಿದೆ. ಇನ್ನೂ ಎರಡು ಮೂರು ದಿನಗಳಲ್ಲಿ ಸೋಂಕಿನ ಪ್ರಮಾಣ ಕಡಿಮೆಯಾಗಲಿದ್ದು, ನಮ್ಮ ಜಿಲ್ಲೆಯನ್ನು ಅನ್‌ಲಾಕ್ ಮಾಡಲಾಗುವುದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.**

**ಆದರೆ, ಸಾರ್ವಜನಿಕರು ಕೊರೊನಾ ಸೋಂಕು ಕಡಿಮೆಯಾಗಿದೆ ಎಂದು ಕೋವಿಡ್ ನಿಯಮಗಳನ್ನು ನಿರ್ಲಕ್ಷಿಸುವಂತಿಲ್ಲ. ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ 3 ನೇ ಅಲೆಯ ಎಚ್ಚರಿಕೆ ನೀಡಿರುವುದರಿಂದ ಜನರು ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸೋಂಕಿನ ಕುರಿತು ನಾವು ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.**

**ಅಂತರರಾಷ್ಟ್ರೀಯ ಯೋಗ ದಿನಾಚರಣೆ**

# ಹೊನ್ನಾಳಿಗೆ 582 ಕೋಟಿ ರೂ. ಯೋಜನೆಗಳಿಗೆ ಸಂಪುಟ ಅಸ್ತು





**ಶಾಸಕ ರೇಣುಕಾಚಾರ್ಯ ಕ್ಷೇತ್ರಕ್ಕೆ ಬೃಹತ್ ಕೊಡುಗೆ**

ಬೆಂಗಳೂರು, ಜೂ. 21 – ಹೊನ್ನಾಳಿ ವಿಧಾನಸಭಾ ಕ್ಷೇತ್ರಕ್ಕೆ ಬೃಹತ್ ಕೊಡುಗೆ ನೀಡಿರುವ ರಾಜ್ಯ ಸರ್ಕಾರ, 582 ಕೋಟಿ ರೂ.ಗಳ ಯೋಜನೆಗಳಿಗೆ ವಿಸ್ತೃತ ಯೋಜನಾ ವರದಿ ರೂಪಿಸಲು ಅನುಮೋದನೆ ನೀಡಿದೆ.

ಇದರಲ್ಲಿ 94 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ 415 ಕೋಟಿ ರೂ.ಗಳ ಯೋಜನೆ ಸಹ ಸೇರಿದೆ.

ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಹೊನ್ನಾಳಿ ತಾಲೂಕು ವ್ಯಾಪ್ತಿಯಲ್ಲಿ ಬರುವ 94 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನು ಎತ್ತಿ ಕೆರೆಗಳನ್ನು ತುಂಬಿಸುವ 415 ಕೋಟಿ ರೂ. ಮೊತ್ತದ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದವರು ಹೇಳಿದ್ದಾರೆ.

ಇದೇ ವೇಳೆ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ವೃದ್ಧಿಸುವ ಯೋಜನೆಯನ್ನು ಎರಡು ಹಂತಗಳಲ್ಲಿ ಒಟ್ಟಾರೆ 167 ಕೋಟಿಗಳ ವೆಚ್ಚದಲ್ಲಿ (ಹಂತ 1ರಲ್ಲಿ ರೂ. 121 ಕೋಟಿ ಮತ್ತು ಎರಡನೇ ಹಂತದಲ್ಲಿ ರೂ. 46 ಕೋಟಿ) ಕೈಗೊಳ್ಳುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಶಾಸಕ ಎಂ.ಪಿ ರೇಣುಕಾಚಾರ್ಯ, ಹೊನ್ನಾಳಿ - ನ್ಯಾಮತಿ ಅವಳಿ ಕ್ಷೇತ್ರಗಳ ಅಭಿವೃದ್ಧಿ ಯೋಜನೆಗಳಿಗೆ 585 ಕೋಟಿ ರೂ.ಗಳ ಆಡಳಿತಾತ್ಮಕ ಅನುಮೋದನೆ ನೀಡಿ ಹಣ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರಿಗೆ ಧನ್ಯವಾದ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ.

ಯಡಿಯೂರಪ್ಪ ಅವರ ನಾಯಕತ್ವದ ವಿಷಯ ಬಂದಾಗ ರೇಣುಕಾಚಾರ್ಯ ಅವರು ಪ್ರಬಲವಾಗಿ ಮುಖ್ಯಮಂತ್ರಿ (2ನೇ ಪುಟಕ್ಕೆ)

## ಒಂದೇ ದಿನ ದೇಶದಲ್ಲಿ 82 ಲಕ್ಷ ಜನರಿಗೆ ಲಸಿಕೆ

**10 ಲಕ್ಷಕ್ಕೂ ಹೆಚ್ಚು ಲಸಿಕೆಯೊಂದಿಗೆ ರಾಜ್ಯಕ್ಕೆ ಎರಡನೇ ಸ್ಥಾನ**

ನವದೆಹಲಿ ಜೂ 21 – ಕೇಂದ್ರ ಸರ್ಕಾರ ಲಸಿಕೆಗೆ ಹೊಸ ನೀತಿಯನ್ನು ಜಾರಿಗೆ ತಂದ ಮೊದಲ ದಿನ ದಾಖಲೆಯ 82.7 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಜನವರಿ 16ರಿಂದ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಇದುವರೆಗೂ 28.33 ಕೋಟಿ ಜನರು ಲಸಿಕೆ ಪಡೆದಿದ್ದಾರೆ ಎಂದು ಕೊವಿನ್ ಪೋರ್ಟಲ್ ಮಾಹಿತಿ ತಿಳಿಸಿದೆ.

ಕೇಂದ್ರ ಸರ್ಕಾರ ಈ ಹಿಂದೆ 45 ವರ್ಷದ ಮೇಲಿನವರಿಗೆ ಮಾತ್ರ ಲಸಿಕೆ ನೀಡುತ್ತಿತ್ತು. ಪ್ರತಿಪಕ್ಷಗಳ ಆಡಳಿತದ ಹಲವು ರಾಜ್ಯಗಳ ಒತ್ತಾಯದ ನಂತರ ಕೇಂದ್ರ ಸರ್ಕಾರ 18 ವರ್ಷದ ಮೇಲಿನವರಿಗೂ ಲಸಿಕೆ ನೀಡಲು ಸಮ್ಮತಿಸಿತ್ತು. ಹೊಸ ನೀತಿಯ ಅನ್ವಯ ಸೋಮವಾರದಿಂದ ಲಸಿಕೆ ನೀಡಲಾಗುತ್ತಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸೋಮವಾರ ದಾಖಲೆಯ ಲಸಿಕೆ ನೀಡಿರುವುದು ಹರ್ಷದಾಯಕ. ಕೊರೊನಾ ವಿರುದ್ಧದ ಹೋರಾಟದಲ್ಲಿ ಲಸಿಕೆ ನಮ್ಮ ಪ್ರಬಲ (2ನೇ ಪುಟಕ್ಕೆ)

## ಲಸಿಕೆಯಿಂದ ಬಂಜೆತನ ಬರುವುದಿಲ್ಲ : ಕೇಂದ್ರ

ನವದೆಹಲಿ, ಜೂ. 21 – ಲಸಿಕೆಗಳು ಸುರಕ್ಷಿತ ಹಾಗೂ ಪರಿಣಾಮಕಾರಿ ಎಂದು ಹೇಳಿರುವ ಕೇಂದ್ರ ಆರೋಗ್ಯ ಸಚಿವಾಲಯ, ಲಸಿಕೆಯಿಂದ ಬಂಜೆತನ ಉಂಟಾಗುತ್ತದೆ ಎಂಬ ಆತಂಕಕ್ಕೆ ವೈಜ್ಞಾನಿಕ ಆಧಾರಗಳಿಲ್ಲ ಎಂದು ಹೇಳಿದೆ.

ಕೊರೊನಾ ಲಸಿಕೆಯಿಂದ ಜನನ ಸಾಮರ್ಥ್ಯದ ಮೇಲೆ ಪರಿಣಾಮವಾಗಬಹುದು ಎಂಬ ಆತಂಕ ಹರಡಿದೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿರುವ ಹಿನ್ನೆಲೆಯಲ್ಲಿ ಸಚಿವಾಲಯ ಸ್ಪಷ್ಟನೆ ನೀಡಿದೆ.

ಪೋಲಿಯೋ ಹಾಗೂ ದಡಾರದ ಲಸಿಕೆ ನೀಡುವ ಸಂದರ್ಭದಲ್ಲೂ ಇಂತಹ ಗಾಳಿ ಸುದ್ದಿ ಹಾಗೂ ಅಪಪ್ರಚಾರ ಮಾಡಲಾಗಿತ್ತು ಎಂದು ಸಚಿವಾಲಯ ಹೇಳಿದೆ.


## ಜಿಲ್ಲೆಯಲ್ಲಿ 176 ಪಾಸಿಟಿವ್ 7 ಸಾವು, 150 ಗುಣಮುಖ

ದಾವಣಗೆರೆ, ಜು.13- ಜಿಲ್ಲೆಯಲ್ಲಿ 176 ಕೊರೊನಾ ಪಾಸಿಟಿವ್ ಪ್ರಕರಣಗಳು ಸೋಮವಾರ ವರದಿಯಾಗಿವೆ. 7 ಜನರು ಸೋಂಕಿನಿಂದ ಮೃತಪಟ್ಟಿದ್ದು, 150 ಜನರು ಗುಣಮುಖರಾಗಿರುವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ದಾವಣಗೆರೆಯಲ್ಲಿ 77, ಹರಿಹರ 15, ಜಗಳೂರು 9, ಚನ್ನಗಿರಿ 46, ಹೊನ್ನಾಳಿ 16 ಹಾಗೂ ಹೊರ ಜಿಲ್ಲೆಯ 13 ಜನರಲ್ಲಿ ಸೋಂಕು (3ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 151 ಅಡಿ 6 ಇಂಚು
ಒಳ ಹರಿವು: 13307 ಕ್ಯೂಸೆಕ್ಸ್
ಹೊರ ಹರಿವು : 78 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 136.7 ಅಡಿ



## ನಗರದಲ್ಲಿ ಸ್ವಯಂ ಅನ್‌ಲಾಕ್ ಆದ ವರ್ತಕರು

### ಬಹುತೇಕ ಎಲ್ಲವೂ ಓಪನ್, ಕೆಲವೆಡೆ ಫುಲ್-ಹಾಫ್ ವ್ಯಾಪಾರ

ದಾವಣಗೆರೆ, ಜೂ.21- ಜಿಲ್ಲಾಡಳಿತ ಲಾಕ್‌ಡೌನ್ ನಿರ್ಬಂಧಗಳನ್ನು ತುಸು ಸಡಿಲಗೊಳಿಸಿ, ಕೆಲವು ಅಂಗಡಿಗಳನ್ನು ತೆರೆಯಲು ಮಾತ್ರ ಅನುಮತಿಸಿತ್ತು. ಆದರೆ ಸೋಮವಾರ ನಗರದ ಬಹುತೇಕ ವರ್ತಕರು ಸ್ವಯಂ ಅನ್‌ಲಾಕ್ ಆಗಿ ವಹಿವಾಟು ನಡೆಸಿದರು.

ಜಿಲ್ಲೆಯಲ್ಲಿ ಹಾಲು, ಡೈರಿ, ಹಾಲಿನ ಬೂತ್, ಪಶು ಆಹಾರ ಅಂಗಡಿಗಳು, ಕಿರಾಣಿ ಅಂಗಡಿಗಳು, ದಿನಸಿ, ಹಣ್ಣು, ತರಕಾರಿಗಳು, ಮಾಂಸ ಮತ್ತು ಮೀನು ಹಾಗೂ ಎಲ್ಲಾ ಮದ್ಯದ ಅಂಗಡಿಗಳು, ಕಟ್ಟಡ ನಿರ್ಮಾಣ ಸಾಮಗ್ರಿ ಮಾರುವ ಅಂಗಡಿಗಳು ಸೇರಿದಂತೆ ಕೆಲವೇ ಅಂಗಡಿಗಳನ್ನು ತೆರೆಯಲು ಜಿಲ್ಲಾಡಳಿತ ಅನುಮತಿ ನೀಡಿತ್ತು.

ಆದರೆ, ಸೈಕಲ್ ಅಂಗಡಿಗಳಿಂದ ಹಿಡಿದು ಕಟಿಂಗ್ ಶಾಪ್, ಆಟೋಮೊಬೈಲ್, ಜೆರಾಕ್ಸ್, ಪುಸ್ತಕ, ಫ್ಯಾನ್ಸಿ ಸ್ಟೋರ್, ಲಾಂಡ್ರಿಗಳು, ವಾಟರ್ ಸರ್ವೀಸ್ ಸೇರಿದಂತೆ ಹತ್ತು ಹಲವು ಅಂಗಡಿಗಳ ಮಾಲೀಕರು ಮಧ್ಯಾಹ್ನ 2ರವರೆಗೆ ಬಾಗಿಲು ತೆರೆದು ವಹಿವಾಟು ನಡೆಸಿದರು.

ಬಟ್ಟೆ, ಬಂಗಾರ, ಎಲೆಕ್ಟ್ರಾನಿಕ್ಸ್, ಪಾತ್ರೆ ಅಂಗಡಿ ಸೇರಿದಂತೆ ಕೆಲವೇ ಅಂಗಡಿಗಳು ಮಾತ್ರ ಮಾರುಕಟ್ಟೆಯಲ್ಲಿ ಮುಚ್ಚಿದ್ದವು. ಜಿಲ್ಲಾಡಳಿತವೇ ಒಂದು ರೀತಿ ಅನ್‌ಲಾಕ್ ಮಾಡಿದ್ದರೆ, ಸಾರ್ವಜನಿಕರು ತಮಗೆ ತಿಳಿದ ರೀತಿಯ ಅನ್‌ಲಾಕ್ ಮಾಡಿಕೊಂಡಿದ್ದುದು ಕಂಡು ಬಂತು. ಅಗತ್ಯ ವಸ್ತುಗಳ ಖರೀದಿಗಾಗಿ ಜನರು ಬೆಳಿಗ್ಗೆಯಿಂದಲೇ ಭರಾಟೆ ನಡೆಸಿದ್ದು ಕಂಡು ಬಂತು. ಮಧ್ಯಾಹ್ನ 2 ಗಂಟೆ ನಂತರ ಪೊಲೀಸರು ಅಂಗಡಿಗಳನ್ನು ಮುಚ್ಚುವಂತೆ ತಿಳಿಸಿದರು.

**ಬಿಎಸ್‌ಎನ್‌ಎಲ್ ಬಳಿ ಟ್ರಾಫಿಕ್ ಪರದಾಟ :** ಹಳೆ ಪಿ.ಬಿ. ರಸ್ತೆಯಲ್ಲಿ ಬಿ.ಎಸ್.ಎನ್.ಎಲ್. ಕಚೇರಿ ಬಳಿ ಬೆಳಿಗ್ಗೆ 10 ಗಂಟೆ ವೇಳೆ ಸಂಚಾರ ಅಸ್ತವ್ಯಸ್ತವಾಗಿದ್ದು (2ನೇ ಪುಟಕ್ಕೆ)

### ಮೊಬೈಲ್, ಸ್ಟೇಷನರಿ ಅಂಗಡಿಗೆ ಅವಕಾಶ

**ಪುಸ್ತಕ, ಸ್ಟೇಷನರಿ ಅಂಗಡಿಗಳು ಹಾಗೂ ಮೊಬೈಲ್ ಅಂಗಡಿಗಳನ್ನು ತೆರೆಯಲು ಜಿಲ್ಲಾಡಳಿತ ಅನುಮತಿ ನೀಡಿದೆ.**

**ಸೋಮವಾರದಿಂದ ಶುಕ್ರವಾರದ ವರೆಗೆ ಪ್ರತಿ ದಿನ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಈ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಿರುವುದಾಗಿ ಜಿಲ್ಲಾಡಳಿತ ತಿಳಿಸಿದೆ. ಅಲ್ಲದೆ ಕೈಗಾರಿಕಾ ಚಟುವಟಿಕೆಗಳಿಗೆ ವಿಧಿಸಿರುವ ನಿಬಂಧನೆಯು ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಅವಧಿಯಲ್ಲಿಯು ಅನ್ವಯವಾಗುತ್ತದೆ ಎಂದು ಜಿಲ್ಲಾಡಳಿತ ತಿಳಿಸಿದೆ.**



### ದಾವಣಗೆರೆಯಿಂದ 80 ಬಸ್ ಸಂಚಾರ

ಕೆಎಸ್ಸಾರ್ಟಿಸಿ ಬಸ್‌ಗಳ ಓಡಾಟಕ್ಕೆ ಸರ್ಕಾರ ಅನುಮತಿ ನೀಡಿದ್ದು, ದಾವಣಗೆರೆ ವಿಭಾಗದಿಂದ ಸೋಮವಾರ 80 ಬಸ್ ಗಳು ಸಂಚರಿಸಿವೆ ಎಂದು ಕೆಎಸ್ಸಾರ್ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾಳ್ ತಿಳಿಸಿದ್ದಾರೆ.

ಜಿಲ್ಲೆಯ ಗ್ರಾಮೀಣ ಪ್ರದೇಶಗಳನ್ನು ಹೊರತುಪಡಿಸಿ ಬೆಂಗಳೂರು, ಹೊಸಪೇಟೆ, ರಾಣೇಬೆನ್ನೂರು, ಚಿತ್ರದುರ್ಗ, ಶಿವಮೊಗ್ಗ, ಜಗಳೂರು, ಚನ್ನಗಿರಿ, ಹೊಸದುರ್ಗ ಸೇರಿದಂತೆ (3ನೇ ಪುಟಕ್ಕೆ)

## ಸಚ್ಚಿದಾನಂದ ಶ್ರೀಗಳಿಂದ ವಾಸವಿ ಪೀಠಾರೋಹಣ

### ಸೇವೆ, ಅಧ್ಯಾತ್ಮ, ದಾಸೋಹ: ಶ್ರೀಗಳ ಆಶಯ



ಬೆಂಗಳೂರು, ಜು. 21 - ಆರ್ಯವೈಶ್ಯ ಸಮಾಜದ ಅಧ್ಯಾತ್ಮಿಕ ಶಕ್ತಿ ಕೇಂದ್ರವಾದ ವಾಸವಿ ಪೀಠದ ಗುರುಗಳಾಗಿ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ನಿನ್ನೆ ಪೀಠಾರೋಹಣ ಮಾಡಿದ್ದಾರೆ.

ಕರ್ನಾಟಕ ಆರ್ಯವೈಶ್ಯ ಮಹಾಸಭಾದ ವಾಸವಿ ಪೀಠಾರೋಹಣ ಸಮಿತಿಯು ಮಲ್ಲೇಶ್ವರದ ಕನ್ಯಕಾ ಪರಮೇಶ್ವರಿ ದೇವಾಲಯದಲ್ಲಿ ಸ್ವಾಮೀಜಿ ಪೀಠಾರೋಹಣ ಕಾರ್ಯಕ್ರಮ ನೆರವೇರಿತು.

ನಾಲ್ಕು ಗಂಟೆಗಳಿಗೂ ಅಧಿಕ ಅವಧಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು. ಕೊರೊನಾ ಕಾರಣ ಸರಳವಾಗಿ ಸಮಾರಂಭವನ್ನು ಆಯೋಜಿಸಲಾಗಿತ್ತು. ಆನ್‌ಲೈನ್ ವೇದಿಕೆಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಪೀಠಾರೋಹಣದ ಸಂದರ್ಭದಲ್ಲೇ ರಾಜ್ಯದಾದ್ಯಂತ ಇರುವ ಕನ್ಯಕಾ ಪರಮೇಶ್ವರಿ ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಈ ಸಂದ ರ್ಭದ ಹಿನ್ನೆಲೆಯಲ್ಲಿ ವೃದ್ಧಾಶ್ರಮ, ಅನಾಥಾಶ್ರಮ, ಆಸ್ಪತ್ರೆಗಳಲ್ಲಿ ಅನ್ನದಾನ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಂತಿ ಹಾಗೂ (2ನೇ ಪುಟಕ್ಕೆ)

## ಜು.31ರ ಒಳಗೆ 12ನೇ ತರಗತಿ ಫಲಿತಾಂಶ

ನವದೆಹಲಿ, ಜೂ. 21 – ಸಿಬಿಎಸ್‌ಇ ಹಾಗೂ ಸಿಐಎಸ್‌ಸಿಇ 12ನೇ ತರಗತಿಯ ಮೌಲ್ಯಮಾಪನದ ಬಗ್ಗೆ ವಿದ್ಯಾರ್ಥಿಗಳ ದೂರಿದ್ದರೆ ಬಗೆಹರಿಸಿಕೊಳ್ಳಲು ವ್ಯವಸ್ಥೆ ರೂಪಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಲಾಗಿದೆ.

ಎರಡೂ ಪರೀಕ್ಷಾ ಮಂಡಳಿಗಳು ಈ ಬಗ್ಗೆ ಮಾಹಿತಿ ನೀಡಿವೆ. ಜುಲೈ 31ರ ಒಳಗೆ ಫಲಿತಾಂಶ ಪ್ರಕಟಿಸಲಾಗುವುದು ಎಂದು ಎರಡೂ ಪರೀಕ್ಷಾ ಮಂಡಳಿಗಳು ಹೇಳಿವೆ.

## ಮಕ್ಕಳಿಗಾಗಿ ಪ್ರತಿ ತಾ||ನಲ್ಲಿ ಕೋವಿಡ್ ಕೇರ್ ಸೆಂಟರ್



ಬೆಂಗಳೂರು, ಜೂ.21 - ರಾಜ್ಯದಲ್ಲಿ ಕೊರೊನಾ ಮೂರನೇ ಅಲೆ ಎದುರಿಸಲು ಪ್ರತಿ ತಾಲ್ಲೂಕಿನಲ್ಲಿಯೂ ಮಕ್ಕಳಿಗಾಗಿ ಪ್ರತ್ಯೇಕ ಕೋವಿಡ್ ಕೇರ್ ಸೆಂಟರ್ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಕೋವಿಡ್ 3ನೆ ಅಲೆ ನಿಯಂತ್ರಣ ಕುರಿತು ಬೆಂಗಳೂರು ನಗರ ಜಿಲ್ಲೆ ಹಾಗೂ ಬಿಬಿಎಂಪಿ ವ್ಯಾಪ್ತಿಯ ಜನಪ್ರತಿನಿಧಿಗಳು, ಅಧಿಕಾರಿಗಳ ಸಭೆ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಎರಡನೆ ಅಲೆಯಲ್ಲಿ ಸುಮಾರು 50 ಮಕ್ಕಳು ತಂದೆ, ತಾಯಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಬಾಲ ಸೇವಾ ಯೋಜನೆಯ ಮೂಲಕ ಪ್ರತಿ ತಿಂಗಳು ಮಗುವಿಗೆ 3,500 ರೂ. ನೀಡುವುದು, ಜೊತೆಗೆ ಉಚಿತ ಶಿಕ್ಷಣ ಹಾಗೂ 21 ವರ್ಷ ತುಂಬಿದ ಹೆಣ್ಣು ಮಕ್ಕಳಿಗೆ 1 ಲಕ್ಷ ರೂ. ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ತಂದೆ-ತಾಯಿಗಳಿಲ್ಲದ ಮಕ್ಕಳನ್ನು ನೋಡಿಕೊಳ್ಳಲು ಸಂಬಂಧಿಗಳು ಶಕ್ತರಿಲ್ಲದಿದ್ದರೆ ಇಲಾಖೆ ಮೂಲಕ ದತ್ತು ಸ್ವೀಕಾರ ಕ್ರಮ ಕೈಗೊಳ್ಳಲಾಗುವುದು. ಯಾರಾದರೂ ದಾನಿಗಳು ಈ ಮಕ್ಕಳ ಜೀವನಕ್ಕೆ ಉಜ್ವಲ (2ನೇ ಪುಟಕ್ಕೆ)

## 30 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ

ಬೆಂಗಳೂರು, ಜೂ. 21 - ಕೊರೊನಾ ಸಾಂಕ್ರಾಮಿಕದ ನಡುವೆಯೂ ಪ್ರಸಕ್ತ ಹಣಕಾಸು ಸಾಲಿನಲ್ಲಿ 30.26 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರೈತರು ಮತ್ತು ಸ್ತ್ರೀಶಕ್ತಿ ಗುಂಪುಗಳಿಗೆ ಸಾಲ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಅವಧಿಗೂ ಮುನ್ನವೇ ಮುಂಗಾರು ಮಳೆ ಆರಂಭಗೊಂಡು ರೈತರಲ್ಲಿ ಉತ್ಸಾಹ ಚಿಮ್ಮುವಂತೆ ಮಾಡಿದೆ. ಮಳೆಯಿಂದ ಕೆಲವೆಡೆ ಅತಿವೃಷ್ಟಿ ಕಂಡರೂ ಜಲಾಶಯಗಳಿಗೆ ನೀರು ಹರಿದುಬರುತ್ತಿದೆ ಎಂದವರು ಹೇಳಿದ್ದಾರೆ. ರೈತರು ಬಿತ್ತನೆ ಕಾರ್ಯ ಆರಂಭಿಸಿದ್ದಾರೆ, ಅಂತಹವರಿಗೆ ಸಕಾಲದಲ್ಲಿ ಆರ್ಥಿಕ ನೆರವು ಕಲ್ಪಿಸುವ ಉದ್ದೇಶದಿಂದ ಸಹಕಾರಿ ಬ್ಯಾಂಕ್‌ಗಳ ಮೂಲಕ ಸಾಲ ವಿತರಣೆ ಕಾರ್ಯಕ್ಕೆ ಚಾಲನೆ ನೀಡಿದ್ದೇವೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

ಕಳೆದ ವರ್ಷ ಕೋವಿಡ್ ಸಂದರ್ಭದಲ್ಲೂ ರೈತರು ಬಂಪರ್ ಬೆಳೆ ಬೆಳೆದಿದ್ದಾರೆ, ಈ ವರ್ಷವೂ ಸೋಂಕಿಗೆ ಎದೆಗುಂದದೆ (3ನೇ ಪುಟಕ್ಕೆ)


9ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಪೂಜಾರ್ ಕಲಿವೀರಪ್ಪನವರು
(ಅಜ್ಜಣ್ಣ) ದೊಡ್ಡಬಾತಿ.

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು,
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ ಹಾಗೂ
ಸದಾ ನಿಮ್ಮ ಸ್ಮರಣೆ, ಮಾರ್ಗದರ್ಶನದೊಂದಿಗೆ ಮುನ್ನಡೆಯುತ್ತಿರುವ...

ಧರ್ಮಪತ್ನಿ : ಶ್ರೀಮತಿ ಗೌರಮ್ಮ ಕಲಿವೀರಪ್ಪ ಪೂಜಾರ್
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು





ಸನ್ಮಾನ್ಯ ಡಾ|| ಶಾಮನೂರು ಶಿವಶಂಕರಪ್ಪನವರು ಮತ್ತು
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಇವರ ನೇತೃತ್ವದಲ್ಲಿ
ದಾವಣಗೆರೆ ವಕೀಲರ ಸಮುದಾಯ
ಮತ್ತು ಅವರ ಕುಟುಂಬದವರಿಗೆ
ಉಚಿತ ಕೊರೊನಾ ಲಸಿಕಾ ಶಿಬಿರ
ಬನ್ನಿ, ಎಲ್ಲರೂ ಕೈ ಜೋಡಿಸೋಣ, ಕೊರೊನಾ ಎದುರು ಜಯ ಸಾಧಿಸೋಣ
ನುಡಿದಂತೆ ನಡೆದ ನಾಯಕರುಗಳಿಗೆ ಕೃತಜ್ಞತೆಗಳು.
ದಿನಾಂಕ 22.06.2021ರ ಮಂಗಳವಾರ
ಬೆಳಿಗ್ಗೆ 9 ರಿಂದ ಸಂಜೆ 5 ರ ವರೆಗೆ
ಲಸಿಕಾ ಶಿಬಿರದ ಸ್ಥಳ : ದಾವಣಗೆರೆ ಜಿಲ್ಲಾ ವಕೀಲರ ಸಮುದಾಯ ಭವನ, ದಾವಣಗೆರೆ.

# ಅಂತರ ಮರೆತು ಖರೀದಿಗೆ ಬಿದ್ದ ಜನರು



ಹರಪನಹಳ್ಳಿ

ಹರಪನಹಳ್ಳಿ, ಜೂ. 21- ಪಟ್ಟಣದ ಪುರ ಸಭೆ ಹಿಂಭಾಗ, ಗೌಳೇರ ಪೇಟೆ, ಕೊಟ್ಟೂರು ರಸ್ತೆ, ಹಳೇಬಸ್‌ನಿಲ್ದಾಣ, ಐ.ಬಿ. ವೃತ್ತ, ತೆಗ್ಗಿನ ಮಠ, ಹಿರೇಕೇರಿ ವೃತ್ತ, ಬಸ್‌ನಿಲ್ದಾಣ ಸೇರಿದಂತೆ ಅನೇಕ ಕಡೆಗಳಲ್ಲಿ ಅಂಗಡಿಗಳನ್ನು ತೆರೆಯಲಾಗಿದ್ದು ಅಗತ್ಯ ವಸ್ತುಗಳ ಖರೀದಿಗೆಂದು ಸಾಮಾಜಿಕ ಅಂತರ ಮರೆತು ಜನರು ಮುಗಿಬಿದ್ದ ಸನ್ನಿವೇಶ ಪಟ್ಟಣದಲ್ಲಿ ಕಂಡು ಬಂತು.

ಕಳೆದ ಎರಡು ತಿಂಗಳುಗಳ ಕಾಲ ಲಾಕ್‌ಡೌನ್‌ಗೆ ಒಳಗಾಗಿದ್ದ ಜನತೆಗೆ ಸೋಮವಾರದಿಂದ ಲಾಕ್‌ಡೌನ್ ಸಡಿಲಿಕೆಯಿಂದಾಗಿ ಹೊರ ಬಂದ ಜನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿದ್ದರು. ಜಿಲ್ಲಾಡಳಿತದ ಆದೇಶ ಸ್ಪಷ್ಟವಾಗಿ ತಿಳಿಯದ್ದರಿಂದ ಅಂಗಡಿ ಮಾಲೀಕರು ಎಂದಿನಂತೆ ಮಧ್ಯಾಹ್ನ ಬಾಗಿಲು ಮುಚ್ಚಿದ್ದರೆ, ಇನ್ನು ಹಲವರು ಸಂಜೆ 5 ರವರೆಗೂ ಅಂಗಡಿಗಳನ್ನು ತೆರೆದಿದ್ದರು.

ಶೇ. 50ರಷ್ಟು ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಪ್ರಯಾಣಿಕರ ಅ ನು ಕೂ ಲ ಕ್ಕೆ ಕಲ್ಪಿಸಲಾಗಿತ್ತು. ಉಪ ನೋಂದಣಿ, ಬ್ಯಾಂಕ್, ಸರ್ಕಾರಿ ಕಚೇರಿಗಳ ಮುಂದೆ ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಜನರು ಮುಂದಾಗಿದ್ದರು. ಸೋಮವಾರದಿಂದ ಪಟ್ಟಣದ ಐದು ಕಡೆಗಳಲ್ಲಿ ಲಸಿಕೆ ಕಾರ್ಯಕ್ರಮ ಆಯೋಜಿಸಿದ್ದು, 18 ವರ್ಷ ಮೇಲ್ಪಟ್ಟವರು ಲಸಿಕೆ ಹಾಕಿಸಿಕೊಳ್ಳಲು ಬೆಳಿಗ್ಗೆಯಿಂದಲೇ ಸರತಿ ಸಾಲಿನಲ್ಲಿ ನಿಂತು ಲಸಿಕೆ ಪಡೆದುಕೊಂಡರು.

# ಕೋವಿಡ್ ಇಳಿಮುಖವಾಗಿದೆ ಎಂದು ನಿರ್ಲಕ್ಷ್ಯ ಬೇಡ



## ಹರಪನಹಳ್ಳಿ ಶಾಸಕ ಜಿ. ಕರುಣಾಕರ ರೆಡ್ಡಿ ಎಚ್ಚರಿಕೆ

ಹರಪನಹಳ್ಳಿ, ಜೂ.21- ಕೋವಿಡ್ ಇಳಿಮುಖವಾಗಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿ ಸೆಮಿ ಲಾಕ್ ಇರುವುದು ಆಶ್ಚರ್ಯ ತಂದಿದೆ. ಕೋವಿಡ್ ಇಳಿಮುಖ ಎಂದು ಜನರು ನಿರ್ಲಕ್ಷ್ಯ ವಹಿಸಬಾರದು ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ತಾಲ್ಲೂಕಿನ ಜಂಬುಲಿಂಗನಹಳ್ಳಿ, ಶ್ರೀಕಂಠಪುರ, ಚಿಕ್ಕಮೇಗಳಗೇರಿ, ಹಿರೇಮೇಗಳಗೇರಿ, ಗೊಲ್ಲರಹಟ್ಟಿಗಳಲ್ಲಿ ಬಡವರಿಗೆ ಹಾಗೂ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ಸಿಬ್ಬಂದಿಗಳಿಗೆ, ಆಟೋ ಚಾಲಕರಿಗೆ ಫುಡ್ ಕಿಟ್ ಗಳನ್ನು ವಿತರಿಸಿ ಮಾತನಾಡಿ, ಕೊರೊನಾ ಸಂಕಷ್ಟದಲ್ಲಿರುವವರಿಗೆ ದಿನಸಿ ಕಿಟ್ ವಿತರಣೆ ಒಂದು ಅಳಿಲು ಸೇವೆ ಆಗಿದೆ. ಸ್ವಲ್ಪ ಮಟ್ಟಿಗಾದರೂ ನಿಮ್ಮ ಕುಟುಂಬಕ್ಕೆ ಸಹಾಯವಾಗಲಿದೆ ಎಂದರು.

ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಸೋಂಕಿತರ ಪ್ರಮಾಣ ಇಳಿಮುಖವಾಗಿದೆ. ಇನ್ನಷ್ಟು ನಿರ್ಬಂಧ ಸಡಿಲಿಕೆಗೆ ಜಿಲ್ಲಾಧಿಕಾರಿಯವರೊಂದಿಗೆ ಮಾತನಾಡುತ್ತೇನೆ. ಕಡ್ಡಾಯವಾಗಿ ಮಾಸ್ಕ್ ಧರಿಸಿ, ಪರಸ್ಪರ ಅಂತರ ಕಾಪಾಡಿಕೊಳ್ಳಿ, ಕೊರೊನಾ ಹೆಚ್ಚಳವಾಗದಂತೆ ಎಚ್ಚರ ವಹಿಸಿ ಎಂದರು.

ಈ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಪುರಸಭಾ ಸದಸ್ಯರುಗಳಾದ ದ್ಯಾಮಜ್ಜಿ ರೊಕ್ಕಪ್ಪ, ಕಿರಣ್ ಶಾನ್‌ಭೋಗ್, ಮುಖಂಡರಾದ ಎಂ.ಪಿ. ನಾಯ್ಕ, ಬಾಗಳಿ ಕೊಟ್ರೇಶಪ್ಪ, ಯಡಿಹಳ್ಳಿ ಶೇಖರಪ್ಪ, ಮೆಡಿಕಲ್ ತಿಮ್ಮಣ್ಣ, ಕಡತಿ ರಮೇಶ, ರಾಘವೇಂದ್ರಶೆಟ್ಟಿ, ಯು.ಪಿ. ನಾಗರಾಜ, ಎಂ.ಸಂತೋಷ, ಡಿವೈಎಸ್ಪಿ ಹಾಲಮೂರ್ತಿರಾವ್, ಸಿಪಿಐ ನಾಗರಾಜ್ ಕಮ್ಮಾರ, ವೈದ್ಯಾಧಿಕಾರಿ ಪಿ.ಕೆ. ವೆಂಕಟೇಶ, ಆಸ್ಪತ್ರೆ ಮುಖ್ಯ ವೈದ್ಯ ಡಾ. ಶಿವಕುಮಾರ್, ಸಹಾಯಕ ಆಡಳಿತಾಧಿಕಾರಿ ವೆಂಕಟೇಶ ಬಾಗಲಾರ್, ಪಿಎಸ್‌ಐ ಪ್ರಕಾಶ್ ಇನ್ನಿತರರಿದ್ದರು.

# ಉಚಿತ ಲಸಿಕೆ ಅಭಿಯಾನಕ್ಕೆ ಶಾಸಕರ ಚಾಲನೆ



ಜಗಳೂರು

ಜಗಳೂರು, ಜೂ.21- ಕೋವಿಡ್ ಲಸಿಕೆ ಬಗ್ಗೆ ಯಾವುದೇ ಅನುಮಾನ ಬೇಡ. ಪ್ರತಿಯೊಬ್ಬರೂ ಲಸಿಕೆಯನ್ನು ಹಾಕಿಸಿಕೊಂಡು ಆರೋಗ್ಯವಾಗಿರಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಉಚಿತ ಕೋವಿಡ್ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

18 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಪ್ರತಿಯೊಬ್ಬರಿಗೂ ಕೇಂದ್ರ ಸರ್ಕಾರದ ವತಿಯಿಂದ ಉಚಿತ ಕೋವಿಡ್-19 ಲಸಿಕೆ ನೀಡಲಾಗುತಿದೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕಿನ ವೈದ್ಯಾಧಿಕಾರಿ ಡಾ. ನಾಗರಾಜ್, ಬಿಜೆಪಿ ಅಧ್ಯಕ್ಷರಾದ ಎಚ್.ಸಿ. ಮಹೇಶ್, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಮುಖಂಡರಾದ ಬಿಸ್ತುವಳ್ಳಿ ಬಾಬು, ಶಿವಣ್ಣ ಇನ್ನಿತರರಿದ್ದರು.


**ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ಪಶ್ಚಿಮ 30x45, ಪೂರ್ವ 30x40 (ಮೇಲೆ ಕೆಳಗೆ ಮನೆ ಮತ್ತು ಮೇಲೆ 1 ರೂಂ) (Interior Furnishing) ಉತ್ತರ 30x40 ಡೂಪ್ಲೆಕ್ಸ್, ಎಸ್.ಎಸ್. ಹೈಟೆಕ್ ಬಡಾವಣೆ ಉತ್ತರ 30x50
ಸಂಪರ್ಕಿಸಿ: ಐಗೂರು ವಿಜಯ್‌ಕುಮಾರ್: 99457 02495
ಸುರೇಶ್: 9591160520

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಸ್ಫೂರ್ತಿ ಸೇವಾ ಟ್ರಸ್ಟ್ (ರಿ)
ದಾವಣಗೆರೆ ಇವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನ ದಾಸೋಹ ದಾಸೋಹಿಗಳು
ಶ್ರೀಮತಿ ಗೌರಮ್ಮ ಮತ್ತು ಶ್ರೀ ಎ.ಮಾನಪ್ಪ
ನಿವೃತ್ತ ಮುಖ್ಯಶಿಕ್ಷಕರು ಮತ್ತು ಕಲಾಶಿಕ್ಷಕರು.
ಎಸ್.ಎಸ್.ಎಂ.ಬಿ. ಪ್ರೌಢಶಾಲೆ, ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ ಪೂರ್ವ 30x46 ಡೂಪ್ಲೆಕ್ಸ್ (ಅಥಣಿ ಕಾಲೇಜ್ ರಸ್ತೆ), ಎಸ್.ಎಸ್. 'ಬಿ' ಬ್ಲಾಕ್ ಪೂರ್ವ 30x40 ಡೂಪ್ಲೆಕ್ಸ್ (Interior Furnishing) (5 T.V. Unit) ಮತ್ತು 30x40 ಹಳೇ ಮನೆ ಸೈಟು ರೇಟಿಗೆ ಮತ್ತು ಉತ್ತರ 20x30, ಚಿಗಟೇರಿ ಲೇಔಟ್ ಪೂರ್ವ 30x50
ಸಂಪರ್ಕಿಸಿ: ಐಗೂರು ವಿಜಯ್‌ಕುಮಾರ್: 99457 02495
ಸುರೇಶ್: 9591160520

**ಸೈಟ್‌ಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ ಹಳೇ ಅಮರಾವತಿ ಬಡಾವಣೆಯಲ್ಲಿ ಪೂರ್ವ 30x38, ರಶ್ಮಿ ಹಾಸ್ಟೆಲ್ ಹತ್ತಿರದ ಹೊಸ ಲೇಔಟ್‌ನಲ್ಲಿ 30x40 ಹಾಗೂ 30x38, 30x36
ಮಂಜುನಾಥ್ ಏಜೆಂಟ್
98444 91792

**ಮನೆ ಲೀಸ್‌ಗೆ ಇದೆ**
ನಗರದ ಶಾಮನೂರಿನಲ್ಲಿ 3 ಬೆಡ್‌ರೂಂವುಳ್ಳ ಡ್ಯೂಪ್ಲೆಕ್ಸ್ ಮನೆ ಲೀಸ್‌ಗೆ ಇದೆ.
ಆಸಕ್ತರು ಸಂಪರ್ಕಿಸಿ :
74060 39119

**ಸೈಟ್‌ಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ 60x40 North, 60x38 East, 30x50 North, 30x40 West, 50x50 West, 30x38 30x38 East ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಗೋಡೌನ್ ಬೇಕಾಗಿದೆ**
ದಾವಣಗೆರೆ ನಗರದ ಕೆ.ಆರ್.ರಸ್ತೆ ಹತ್ತಿರದಲ್ಲಿ ಅಥವಾ ಎ.ಪಿ.ಎಂ.ಸಿ. ಯಲ್ಲಿ 5000 Sq.ft ಗೋಡೌನ್ ಜಾಗ ಬಾಡಿಗೆಗೆ ಬೇಕಾಗಿರುತ್ತದೆ.
ಸಂಪರ್ಕಿಸಿ
7406396332, 7406740635

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x50 East, 50x50 West, 40x60 North, 30x50 North, 30x50 West, 60x45 North East Cornner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಗಾರರು ಬೇಕಾಗಿದ್ದಾರೆ**
Moto wash Water Service Stationನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
78299 91320
86182 19879

**HOME TUTION**
8,9,10 ಮತ್ತು 11ನೇ ತರಗತಿಗಳಿಗೆ. ವಿಷಯಗಳು: Physics, Chemistry and Mathematics
ಸಂಪರ್ಕಿಸಿ
98808 23640

**ಕಡಿಮೆ ಬೆಲೆಯಲ್ಲಿ**
Sanitizer 5 ltr can Rs. 450. True view Oximeter Rs. 1050. (2 years Replacement warranty), Vaporizer - Rs. 150. 50 Rs - 4 Pieces N95. Face shield, Face guard, All Covid-19 Products available in 70% Discount. Contact :
80882 10419

**ADVANCE SPOKEN ENGLISH & GRAMMAR**
online live Class Started, Join Immediately
Study IQ Academy
Davanagere
8951717444, 9740215992

ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಸೇಲ್ಸ್ & ಮಾರ್ಕೆಟಿಂಗ್**
ಮಾರ್ಕೆಟಿಂಗ್ ಕೆಲಸ ಮಾಡಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ.
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಸ್ ಏರಿಯಾ, ದಾವಣಗೆರೆ.
96206 38679

**Online Tutions**
From 3 std to 10 std
Bruit abacus and vedic maths
97390 66956


**ಭದ್ರಾ ನ್ಯಾಚುರಲ್ಸ್**
ಮೆಡ್ ಪ್ಲಸ್ ಎದುರು, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
ಆಯುರ್ವೇದಿಕ್ ಔಷಧಗಳು
ರೋಗ ನಿರೋಧಕ ಶಕ್ತಿವೃದ್ಧಿಯ ಪೋಷಕಾಂಶಗಳು, ಮನೆ ಮದ್ದುಗಳು ಒಂದೇ ಸೂರಿನಡಿ
ಸಂಪರ್ಕಿಸಿ: ಮೆಳ್ಳೇಕಟ್ಟೆ ಬಸವರಾಜ್ ಬಿ.ಎಸ್ಸಿ (ಅಗ್ರಿ)
94483 23796
76761 38170

**WANTED**
Experienced tally operater. Full time job attractive salary Only for Male
70190 73080

**Required**
Experienced office Assistant having Knowledge in Tally and GST Filing. Contact :
99000 22030

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು, ಆಯಾ ಬೇಕಾಗಿದ್ದಾರೆ. ನುರಿತ, ಅನುಭವವಿರುವ A.N.M. ಮತ್ತು G.N.M. ಆದವರು. ಬಯೋಡೇಟಾದೊಂದಿಗೆ ಸಂಪರ್ಕಿಸಿ.
98450 35710


## ಬಿ. ರಘು ನಿಧನ



ದಾವಣಗೆರೆ ಬೇತೂರು ರಸ್ತೆಯ ಬಿಡಿಓ ಆಫೀಸ್ ಹಿಂಭಾಗದ ವಾಸಿ **ಶ್ರೀ ಬಿ. ರಘು** ಅವರು ದಿನಾಂಕ 21.6.2021ರ ಸೋಮವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 38 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.6.2021ರ ಮಂಗಳವಾರ ಬೆಳಿಗ್ಗೆ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ


ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಹೊಸ ಚಿಕ್ಕನಹಳ್ಳಿ ರತ್ನಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೊಸ ಚಿಕ್ಕನಹಳ್ಳಿ ವಾಸಿ ಆನೆಕೊಂಡದ ಬಸವರಾಜಪ್ಪನವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ (67) ಅವರು ದಿನಾಂಕ 21.06.2021 ನೇ ಸೋಮವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.06.2021ರ ಸೋಮವಾರ ಸಂಜೆ 5 ಗಂಟೆಗೆ ಹೊಸ ಚಿಕ್ಕನಹಳ್ಳಿ ತೋಟದ ನೆರವೇರಿತು.

# ವಾಸವಿ ಶ್ರೀ ಪೀಠಾರೋಹಣ

(1ನೇ ಪುಟದಿಂದ) ಸಹಬಾಳ್ವೆಗೆ ಹೆಸರಾದ ಆರ್ಯವೈಶ್ಯ ಸಮಾಜದವರು ಈ ನಾಡಿನ ಆಸ್ತಿಯಾಗಿದ್ದಾರೆ ಎಂದರು.

ವ್ಯಾಪಾರ–ವ್ಯವಹಾರದಲ್ಲಿ ತೊಡಗಿರುವ ಸಮುದಾಯದವರು, ಈ ದೇಶದ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಅವರ ಧಾರ್ಮಿಕ ಶಕ್ತಿಯಾದ ವಾಸವಿ ಪೀಠಕ್ಕೆ ದ್ವಿತೀಯ ಗುರುಗಳಾಗಿ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಪೀಠಾರೋಹಣ ಮಾಡಿರುವುದು ಸಂತೋಷವನ್ನುಂಟು ಮಾಡಿದೆ ಎಂದು ತಿಳಿಸಿದರು.

ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ಹಲವು ವರ್ಷಗಳಿಂದ ವಾಸವಿ ಪೀಠ ಖಾಲಿಯಿತ್ತು. ಈ ಪೀಠವು ಪುನರುತ್ಥಾನ ಆಗಬೇಕೆಂಬ ಇಚ್ಛೆಯಿದೆ. ಎಲ್ಲ ಸಂತರ ಆಶೀರ್ವಾದದಿಂದ ಸಮಾಜಕ್ಕೆ ಗೌರವ ತರುವಂತಹ ಭವ್ಯವಾದ ಪೀಠವಾಗಿ ಹೊರಹೊಮ್ಮಬೇಕಿದೆ. ಮುಂದಿನ ದಿನಗಳಲ್ಲಿ ಸೇವೆ, ಅಧ್ಯಾತ್ಮ ಹಾಗೂ ದಾಸೋಹವು ನಡೆಯಲಿದೆ ಎಂದು ಹೇಳಿದರು.

ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯಲಾಗುವುದು. ಜೀವನದಲ್ಲಿ ವಿಘ್ನಗಳು ಬರುವುದು ಸಹಜ. ಒಳ್ಳೆಯ ಕಾರ್ಯಕ್ಕೆ ಎಷ್ಟೇ ವಿಘ್ನಗಳು ಬಂದರೂ ಹಿಂದೆ ಸರಿಯಬಾರದು.

ವಾಸವಿ ದೇವಸ್ಥಾನಗಳು ಸಂಸ್ಕಾರ ಕೇಂದ್ರಗಳಾಗಬೇಕು. ವಿದ್ಯಾಸಂಸ್ಥೆಗಳು ಮೌಲ್ಯಯುತ ಶಿಕ್ಷಣವನ್ನು ನೀಡಬೇಕು ಎಂದು ಶ್ರೀಗಳು ಹೇಳಿದರು.

ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಚಿನ್ಮಯ ಮಿಷನ್‌ನ ಸ್ವಾಮಿ ಬ್ರಹ್ಮಾನಂದ ಗುರೂಜಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

# ಸ್ವಯಂ ಅನ್‌ಲಾಕ್ ಆದ ವರ್ತಕರು

(1ನೇ ಪುಟದಿಂದ) ಕಂಡು ಬಂತು. ಮುಖ್ಯ ರಸ್ತೆಯ ಒಂದು ಭಾಗ ಬಂದ್ ಮಾಡಿದ್ದು ಸಂಚಾರಿಗಳಿಗೆ ಸಮಸ್ಯೆಯಾಗಿತ್ತು. ರಸ್ತೆ ಬಂದ್ ಆಗಿರುವುದು ತಿಳಿಯದ ಸವಾರರು ರಶ್‌ನಲ್ಲಿ ಸಿಲುಕಿ ಪರದಾಡಿದರು.

**ಫುಲ್, ಹಾಫ್ ಮಾರಾಟ :** ಆಟೋಮೊಬೈಲ್, ಸ್ಟೇಷನರಿ, ಫ್ಯಾನ್ಸಿ ಸೇರಿದಂತೆ ಹಲವಾರು ಅಂಗಡಿಯವರಲ್ಲಿ ಕೆಲವರು ಪೂರ್ಣ ಬಾಗಿಲು ತೆರೆದು ವಹಿವಾಟು ನಡೆಸಿದರು.

ಇನ್ನು ಕೆಲವರು ಅರ್ಧ ಬಾಗಿಲು ತೆರೆದಿದ್ದರು. ಇನ್ನು ಕೆಲವರು ಅಂಗಡಿಯ ಶೆಟರ್ ಮುಚ್ಚಿ, ಗ್ರಾಹಕರು ಬಂದಾಗ ಮಾತ್ರ ಬಾಗಿಲು ತೆರೆಯುತ್ತಿದ್ದುದು ಕಂಡು ಬಂತು.

ಪಂಜರದಲ್ಲಿ ಕೂಡಿಹಾಕಿದ್ದ ಹಕ್ಕಿಗಳಂತಿದ್ದ ಜನತೆ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸುವುದನ್ನೇ ಕಾಯುತ್ತಿದ್ದಂತಿತ್ತು. ಪರಿಣಾಮ ಕೊರೊನಾವನ್ನು ಮರೆತೇ ವ್ಯಾಪಾರ-ವಹಿವಾಟನಲ್ಲಿ ನಿರತರಾಗಿದ್ದರು.

ಸಾಮಾಜಿಕ ಅಂತರ ಹಾಗೂ ಮಾಸ್ಕ್ ಕಡ್ಡಾಯ ನಾಮಕಾವಸ್ಥೆಗಾಗಿ ಮಾತ್ರ ಎನ್ನುವಂತಿತ್ತು. ಮಧ್ಯಾಹ್ನ 2 ಗಂಟೆವರೆಗೆ ಮಾತ್ರ ಅವಕಾಶ ನೀಡಲಾಗಿತ್ತಾದರೂ, ಸಂಜೆವರೆಗೂ ವಾಹನಗಳ ಓಡಾಟ ಹೆಚ್ಚಾಗಿಯೇ ಇತ್ತು.

# ಹರಿಹರದಲ್ಲಿ ಬಸ್ ಸಂಚಾರ ಆರಂಭ



ಹರಿಹರ, ಜೂ.21- ಲಾಕ್‌ಡೌನ್ ಆದೇಶವನ್ನು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಿದ್ದರ ಪರಿಣಾಮವಾಗಿ ನಗದರಲ್ಲಿ ಇಂದು ಬಸ್ ನಿಲ್ದಾಣದಿಂದ ಇತರೆ ಊರುಗಳಿಗೆ ಬಸ್ ಸಂಚಾರ ಪ್ರಾರಂಭವಾಯಿತು.

ಶಿವಮೊಗ್ಗ, ಹರಪನಹಳ್ಳಿ, ಹುಬ್ಬಳ್ಳಿ, ಹೊಸಪೇಟೆ, ದಾವಣಗೆರೆ ನಗರಗಳಿಗೆ ಮಾತ್ರ ಬಸ್ ಸಂಚಾರ ಪ್ರಾರಂಭಿಸಲಾಗಿದ್ದು, ಗ್ರಾಮೀಣ ಪ್ರದೇಶಕ್ಕೆ ಬಸ್ ಸಂಚಾರ ಇರಲಿಲ್ಲ. ಒಂದು ಬಸ್ ಭರ್ತಿಯಾದ ನಂತರದಲ್ಲಿ ಇನ್ನೊಂದು ಬಸ್ ಬಿಡಲಾಯಿತು. ಬೆಂಗಳೂರು, ಮೈಸೂರು ಇತರೆಡೆ ಪ್ರಯಾಣಿಸುವುದಕ್ಕೆ ಮೊದಲೇ ಟಿಕೆಟ್ ಕಾಯ್ದಿರಿಸಬೇಕಿದ್ದು, ಪೂರ್ತಿ ಭರ್ತಿ ಆದ ನಂತರವೇ ಬಸ್ ಸಂಚಾರಕ್ಕೆ ಅವಕಾಶ ನೀಡಲಾಗುತ್ತಿದೆ.

ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 6 ರಿಂದ ಮಧ್ಯಾಹ್ನ 2 ರವರೆಗೆ ವ್ಯಾಪಾರ ವಹಿವಾಟಿಗೆ ಅವಕಾಶ ಮಾಡಿಕೊಟ್ಟಿದ್ದು, ಬಟ್ಟೆ ಮತ್ತು ಬಂಗಾರ ಅಂಗಡಿಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಅಂಗಡಿಗಳು ತೆರೆದುಕೊಂಡು ತಮ್ಮ ವ್ಯಾಪಾರ ವಹಿವಾಟನ್ನು ಎಂದಿನಂತೆ ನಡೆಸಿದವು.

ನಗರದ ಜನನಿಬಿಡ ಪ್ರದೇಶದಲ್ಲಿನ ಕಿರಾಣಿ, ತರಕಾರಿ, ಹೂವು, ಹಣ್ಣು, ಹಾರ್ಡ್‌ವೇರ್, ಎಲೆಕ್ಟ್ರಾನಿಕ್, ಬೇಕರಿ, ಮೆಡಿಕಲ್ ಶಾಪ್, ಹಾಲಿನ ಕೇಂದ್ರ, ಬಾರ್, ಕೈಗಾರಿಕೆ, ಗೊಬ್ಬರ, ಬೀಜ, ಬ್ಯಾಂಕುಗಳು ಸೇರಿದಂತೆ ಇತರೆ ಅಂಗಡಿಗಳು ತಮ್ಮ ವ್ಯಾಪಾರ, ವಹಿವಾಟು ನಡೆಸಿದರೆ, ಹೋಟೆಲ್ ಮತ್ತು ಬಾರ್‌ಗಳಲ್ಲಿ ಪಾರ್ಸೆಲ್‌ಗೆ ಮಾತ್ರ ಅವಕಾಶ ನೀಡಿಲಾಗಿದೆ. ಬಟ್ಟೆ, ಬಂಗಾರ, ಸ್ಟೇಷನರಿ, ಲಾಡ್ಜ್ ಬಂದ್ ಮಾಡಲಾಗಿದೆ. ದೇವಾಲಯಗಳು ಬೆಳಗ್ಗೆ ಪೂಜೆ ಮತ್ತು ಮಂಗಳಾರತಿ ಆದ ನಂತರದಲ್ಲಿ ಬಾಗಿಲು ಹಾಕಲಿದ್ದು, ಭಕ್ತರಿಗೆ ದರ್ಶನಕ್ಕೆ ಅವಕಾಶವಿರುವುದಿಲ್ಲ.

# ಕೊರೊನಾದಿಂದ ಪಾರಾಗಲು ಲಸಿಕೆ ಅಸ್ತ್ರ



## ಮಲೇಬೆನ್ನೂರಿನಲ್ಲಿ ಟಿಹೆಚ್‌ಓ ಡಾ. ಚಂದ್ರಶೇಖರ್

ಮಲೇಬೆನ್ನೂರು, ಜೂ.21- ಯಲವಟ್ಟಿ ಗ್ರಾ.ಪಂ. ವ್ಯಾಪ್ತಿಯ ಲಕ್ಕಶೆಟ್ಟಿ ಹಳ್ಳಿ ಗ್ರಾಮದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ವೈದ್ಯರ ನಡೆ ಹಳ್ಳಿ ಕಡೆ ವಿಶೇಷ ಕಾರ್ಯಕ್ರಮಕ್ಕೆ ಟಿಹೆಚ್‌ಓ ಡಾ. ಚಂದ್ರಮೋಹನ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕೊರೊನಾದಿಂದ ಪಾರಾಗಲು ಲಸಿಕೆ ಅಸ್ತ್ರವಾಗಿದ್ದು, ಪ್ರತಿಯೊಬ್ಬರೂ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿಕೊಂಡು, ಕೊರೊನಾದಿಂದ ಸುರಕ್ಷಿತವಾಗಿರಿ ಎಂದು ಜನತೆಗೆ ಮನವಿ ಮಾಡಿದರು.

ಲಸಿಕೆ ಅಭಿಯಾನದಲ್ಲಿ 69 ಜನರಿಗೆ ಕೋವಿಶೀಲ್ಡ್ ಪ್ರಥಮ ಡೋಸ್ ಲಸಿಕೆ ನೀಡಲಾಯಿತು. ಅಲ್ಲದೇ 65 ಜನರಿಗೆ ಆರ್‌ಟಿಪಿಸಿಆರ್ ಮತ್ತು 14 ಜನರಿಗೆ ರ್‍ಯಾಪಿಡ್ ಟೆಸ್ಟ್ ಮಾಡಲಾಯಿತು.

ಈ ವೇಳೆ ಒಬ್ಬರಿಗೂ ಪಾಸಿಟಿವ್ ವರದಿ ಬರಲಿಲ್ಲ.

ವೈದ್ಯಾಧಿಕಾರಿ ಡಾ. ತಿಪ್ಪೇಸ್ವಾಮಿ, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮಣ್ಣ, ತಾಲ್ಲೂಕು ಆಶಾ ಮೇಲ್ವಿಚಾರಕಿ ಆಶಾ, ಪಿಡಿಓ ರಾಮನಗೌಡ, ಕಾರ್ಯ ದರ್ಶಿ ದೀಪಾ, ಕಿರಿಯ ಆರೋಗ್ಯ ಸಹಾಯಕಿ ಸಾಕಮ್ಮ, ಬಿಲ್ ಕಲೆಕ್ಟರ್ ಮಂಜಾನಾಯ್ಕ, ಆಶಾ ಕಾರ್ಯಕರ್ತೆ ಮಂಗಳಮ್ಮ, ಅಂಗನವಾಡಿ ಕಾರ್ಯಕರ್ತೆ ಗೀತಮ್ಮ, ಗ್ರಾಮ ಸಹಾಯಕ ಚಂದ್ರಪ್ಪ ಈ ವೇಳೆ ಹಾಜರಿದ್ದರು.

**496 ಟೆಸ್ಟ್:** ಸೋಮವಾರ ಹರಿಹರ ತಾಲ್ಲೂಕಿನಲ್ಲಿ 496 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿದ್ದು, ಈ ಪೈಕಿ 96 ರಾಪಿಡ್ ಟೆಸ್ಟ್‌ನಲ್ಲಿ 7 ಜನರಿಗೆ ಸೋಂಕು ದೃಢಪಟ್ಟಿದೆ. ಬೆಳಗಿನ ವರದಿ ಪ್ರಕಾರ 13 ಜನರ ಆರ್‌ಟಿಪಿಸಿಆರ್ ಟೆಸ್ಟ್ ಪಾಸಿಟಿವ್ ಬಂದಿದೆ.

# ಒಂದೇ ದಿನ 82 ಲಕ್ಷ ಜನರಿಗೆ ಲಸಿಕೆ

(1ನೇ ಪುಟದಿಂದ) ಅಸ್ತ್ರವಾಗಿದೆ. ಲಸಿಕೆ ಪಡೆದವರು ಹಾಗೂ ಇಷ್ಟೊಂದು ನಾಗರಿಕರು ಲಸಿಕೆ ಪಡೆಯಲು ಶ್ರಮಿಸಿದ ಮುಂಚೂಣಿ ಕಾರ್ಯಕರ್ತರಿಗೆ ಅಭಿನಂದನೆ ಎಂದಿದ್ದಾರೆ.

ಈ ಹಿಂದೆ ಏಪ್ರಿಲ್ 1ರಂದು 48 ಲಕ್ಷ ಡೋಸ್ ಲಸಿಕೆಯನ್ನು ಒಂದೇ ದಿನದಲ್ಲಿ ನೀಡಿದ್ದು ಹಿಂದಿನ ದಾಖಲೆಯಾಗಿತ್ತು. ಜೂನ್ ತಿಂಗಳಲ್ಲಿ ಇದುವರೆಗೂ ದಿನವೊಂದಕ್ಕೆ 31 ಲಕ್ಷ ಡೋಸ್ ಲಸಿಕೆ ನೀಡುತ್ತಾ ಬರಲಾಗಿತ್ತು.

ಮೇ ಮೊದಲ ವಾರದಲ್ಲಿ ದಿನವೊಂದಕ್ಕೆ 16 ಲಕ್ಷ ಡೋಸ್ ಲಸಿಕೆ ನೀಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಕೊರೊನಾದ 2ನೇ ಅಲೆ ತೀವ್ರ ಉಲ್ಬಣಿಸಿತ್ತು. ಮಧ್ಯ ಪ್ರದೇಶದಲ್ಲಿ ಅತಿ ಹೆಚ್ಚಿನ ಲಸಿಕೆ ನೀಡಲಾಗಿದೆ. ನಂತರದ ಸ್ಥಾನಗಳಲ್ಲಿ ಕರ್ನಾಟಕ ಹಾಗೂ ಉತ್ತರ ಪ್ರದೇಶಗಳಿವೆ.

ಇದಕ್ಕೂ ಮುಂಚೆ ಮಾತನಾಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪ್ರತಿಯೊಬ್ಬರಿಗೂ ಲಸಿಕೆ ನೀಡಲು ಕೇಂದ್ರ ಸರ್ಕಾರ ಎಲ್ಲರಿಗೂ ಉಚಿತ ಲಸಿಕೆ ಅಭಿಯಾನ ಆರಂಭಿಸಿದೆ ಎಂದಿದ್ದರು.

ಮೇ ತಿಂಗಳಲ್ಲಿ ದೇಶಾದ್ಯಂತ ಲಭ್ಯವಾಗುವ ಲಸಿಕೆ ಪ್ರಮಾಣ 7.9 ಕೋಟಿ ಆಗಿತ್ತು. ಅದನ್ನು ಜೂನ್ ತಿಂಗಳಲ್ಲಿ 11.78 ಕೋಟಿಗೆ ಹೆಚ್ಚಿಸಲಾಗಿದೆ

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ದಿನದಂದೇ ಲಸಿಕಾ ಅಭಿಯಾನಕ್ಕೆ ದೊಡ್ಡ ಪ್ರಮಾಣದಲ್ಲಿ ಚುರುಕು ನೀಡಲಾಗಿತ್ತು.

ಮಧ್ಯ ಪ್ರದೇಶದಲ್ಲಿ 15.42 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ. ಕರ್ನಾಟಕದಲ್ಲಿ 10.67 ಲಕ್ಷ ಹಾಗೂ ಉತ್ತರ ಪ್ರದೇಶದಲ್ಲಿ 6.74 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ. ಕೇಂದ್ರ ಸರ್ಕಾರ ಪ್ರಸಕ್ತ ಶೇ.75ರಷ್ಟು ಲಸಿಕೆಗಳನ್ನು ಉಚಿತವಾಗಿ ಒದಗಿಸುತ್ತಿದೆ. ಖಾಸಗಿ ಆಸ್ಪತ್ರೆಗಳ ಮೂಲಕ ಶೇ.25ರಷ್ಟು ಲಸಿಕೆಯನ್ನು ಶುಲ್ಕದ ಮೂಲಕ ನೀಡಲಾಗುತ್ತಿದೆ.

# ಪ್ರತಿ ತಾ॥ನಲ್ಲಿ ಕೋವಿಡ್ ಕೇರ್ ಸೆಂಟರ್

(1ನೇ ಪುಟದಿಂದ) ಭವಿಷ್ಯ ರೂಪಿಸಲು ಮುಂದೆ ಬಂದರೆ ಅಂತ ಮಕ್ಕಳ ಭವಿಷ್ಯ ರೂಪಿಸಲು ಇಲಾಖೆ ಕೊಂಡಿಯಾಗಿ ಕೆಲಸ ಮಾಡಲಿದೆ ಎಂದವರು ಹೇಳಿದ್ದಾರೆ.

ರಾಜ್ಯದಲ್ಲಿ 30 ಮಕ್ಕಳ ಮೇಲೆ ಲಸಿಕೆ ಪ್ರಯೋಗ ಮಾಡಲಾಗಿದೆ. ಅದು ಯಶಸ್ವಿಯಾದರೆ ಮುಂದಿನ ತೀರ್ಮಾನ ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿ ತೆಗೆದುಕೊಳ್ಳುತ್ತಾರೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಶಾಲೆ ತೆರೆಯುವ ಬಗ್ಗೆ ಶಿಕ್ಷಣ ಸಚಿವರ ಜೊತೆ ಚರ್ಚಿಸಲಾಗುವುದು. ತಜ್ಞರ ವರದಿಯಲ್ಲಿ ಅಧಿಕೃತವಾಗಿ ಏನು ವರದಿ ನೀಡಿದ್ದಾರೆ ಎನ್ನುವುದು ನಮ್ಮ ಇಲಾಖೆಗೆ ಇನ್ನೂ ಮಾಹಿತಿ ಬಂದಿಲ್ಲ. ಮುಖ್ಯಮಂತ್ರಿ ನೋಡಿದ ನಂತರ ನಮ್ಮ ಇಲಾಖೆಗೆ ಕಳುಹಿಸಿಕೊಡುತ್ತಾರೆ ಎಂದರು.

ಮಕ್ಕಳಿಗೆ ಮೊಟ್ಟೆ ಕೊರತೆಗೆ ಮಾರುಕಟ್ಟೆಯಲ್ಲಿ ಮೊಟ್ಟೆ ದರ ಹೆಚ್ಚಳವಾಗಿದ್ದು ಸಮಸ್ಯೆಯಾಗಿತ್ತು. ಅದನ್ನು ಗ್ರಾಮ ಪಂಚಾಯತ್‌ನಿಂದ ಮೊಟ್ಟೆ ವಿತರಣೆಗೆ ಸೂಚನೆ ನೀಡಲಾಗಿದೆ. ಪಂಚಾಯತ್‌ನಲ್ಲಿ ಹಣದ ಕೊರತೆ ಬಗ್ಗೆ ಯಾವುದೇ ದೂರು ಬಂದಿಲ್ಲ ಎಂದರು.

# ಮಲೇಬೆನ್ನೂರಿನಲ್ಲಿ ಯೋಗ ದಿನಾಚರಣೆ



ಮಲೇಬೆನ್ನೂರು, ಜೂ.21- ಪಟ್ಟಣದ ನೀರಾವರಿ ಇಲಾಖೆಯ ಆವರಣದಲ್ಲಿ ಪತಂಜಲಿ ಯೋಗ ಸಮಿತಿ ವತಿಯಿಂದ 6ನೇ ಬಾರಿಗೆ ಹಮ್ಮಿಕೊಂಡಿದ್ದ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮವನ್ನು ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಯೋಗ ಶರೀರಕ್ಕೆ ಅಷ್ಟೇ ಅಲ್ಲ. ಮನಸ್ಸಿಗೂ ಶಕ್ತಿ ನೀಡುತ್ತದೆ. ಯೋಗ ಸಾಮರಸ್ಯದ ಸಂಕೇತವಾಗಿದ್ದು, ಪ್ರೀತಿ ಬೆಳೆಸುತ್ತದೆ. ಕೊರೊನಾ ಹೆಮ್ಮಾರಿ ಸೋಂಕಿನಿಂದ ಮಾನಸಿಕವಾಗಿ, ದೈಹಿಕವಾಗಿ ಕುಗ್ಗಿರುವವರಿಗೆ ಯೋಗ, ಸಂಜೀವಿನಿಯಾಗಿ ಕೆಲಸ ಮಾಡುತ್ತದೆ ಎಂದು ಪಟೇಲ್ ಹೇಳಿದರು.

ಮಾರುತಿ ಶಾಲೆಯ ಶಿಕ್ಷಕ ಪರಮೇಶ್ವರಪ್ಪ, ಬನ್ನಿಕೋಡು ಸ.ಹಿ.ಪ್ರಾ. ಶಾಲೆಯ ಶಿಕ್ಷಕ ಅಜರತ್ ಅಲಿ, ಪಿಡಬ್ಲ್ಯೂಡಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್, ನಾರೇಶಪ್ಪ, ಬಿ.ಜಿ. ಬಸವನಗೌಡ, ಪತ್ರಕರ್ತರಾದ ಸದಾನಂದ್, ದೇವರಾಜ್, ಜಿಗಳಿ ಪ್ರಕಾಶ್ ಮಾತನಾಡಿ, ಯೋಗ ನಮ್ಮೆಲ್ಲರನ್ನು ಇಲ್ಲಿ ಸೇರುವಂತೆ ಮಾಡಿದೆ. ಇಂದು ಒಂದೇ ದಿನ ಮಾಡಿದ ಯೋಗಾಭ್ಯಾಸ ಇಷ್ಟು ಖುಷಿ ಕೊಟ್ಟಿದೆ. ಪ್ರತಿನಿತ್ಯ ಕನಿಷ್ಟ ಅರ್ಧಗಂಟೆ ಯೋಗ ಮಾಡಿದರೆ ಜೀವನ ಪೂರ್ತಿ ಖುಷಿಯಾಗಿರಬಹುದು ಎಂದು ಅಭಿಪ್ರಾಯ ಪಟ್ಟರು.

ಅಂಗನವಾಡಿ ಶಿಕ್ಷಕಿ ಹಾಗೂ ಯೋಗ ಶಿಕ್ಷಕಿಯೂ ಆದ ಮಂಜುಳಾ ಯೋಗದ ಮಹತ್ವ ತಿಳಿಸಿದರು. ವಿದ್ಯಾರ್ಥಿಗಳಾದ ಭಾಸ್ಕರ್, ಜೆ. ಮಾನ್ಯ, ಪೂಜಾ, ಮೇಘನಾ ಅವರ ಯೋಗಪಟುಗಳು ಗಮನ ಸೆಳೆದರು.

# ಹೊನ್ನಾಳಿಗೆ 582 ಕೋಟಿ ರೂ. ಯೋಜನೆಗಳಿಗೆ ಸಂಪುಟ ಅಸ್ತು

(1ನೇ ಪುಟದಿಂದ) ಬೆಂಬಲಿಸುತ್ತಾ ಬಂದಿದ್ದಾರೆ. ಇತ್ತೀಚೆಗಷ್ಟೇ ನಾಯಕತ್ವದ ವಿಷಯ ಚರ್ಚೆಗೆ ಬಂದಾಗ, ರೇಣುಕಾಚಾರ್ಯ ಮುಂಚೂಣಿಯಲ್ಲಿ ನಿಂತು ಯಡಿಯೂರಪ್ಪ ಅವರನ್ನು ಸಮರ್ಥಿಸಿಕೊಂಡಿದ್ದರು.

**ಮೂರನೇ ಅಲೆ ವರದಿ ನಾಳೆ ಸಿಎಂಗೆ ಸಲ್ಲಿಕೆ:** ಕೊರೊನಾದ ಮೂರನೇ ಅಲೆ ಸಂಬಂಧ ದೇವಿ ಶೆಟ್ಟಿ ನೇತೃತ್ವದ ಸಮಿತಿ ಸಿದ್ಧಪಡಿಸಿದ ಮಧ್ಯಂತರ ವರದಿಯನ್ನು ನಾಳೆ ಸಿಎಂಗೆ ಸಲ್ಲಿಕೆ ಮಾಡಲಾಗುತ್ತದೆ ಎಂದು ಸಚಿವ ಬೊಮ್ಮಾಯಿ ತಿಳಿಸಿದ್ದಾರೆ. ವರದಿಯನ್ನು ಆಧರಿಸಿ ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ ಎಂದು ತಿಳಿಸಿದರು.

ಹಾಸನದಲ್ಲಿ ವಿಮಾನ ನಿಲ್ದಾಣದ ನಿರ್ಮಾಣ ಕಾಮಗಾರಿಗಳ ರೂ.193.65 ಕೋಟಿಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಇದೇ ವೇಳೆ, ಕೃಷಿ ವಿವಿ ಪ್ರವೇಶಾತಿಯಲ್ಲಿ ಕೃಷಿಕರ ಮಕ್ಕಳಿಗೆ ಪ್ರಸ್ತುತ ಇರುವ ಶೇ.40 ಮೀಸಲಾತಿಯನ್ನು ಶೇ. 50ಕ್ಕೆ ಹೆಚ್ಚಿಸಲು ಸಮ್ಮತಿಸಲಾಗಿದೆ.

ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದ 100 ಪೊಲೀಸ್ ಠಾಣೆಗಳಿಗೆ 200 ಕೋಟಿ ರೂ. ವೆಚ್ಚದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಶಾಲೆ ವಿದ್ಯಾರ್ಥಿಗಳಿಗೆ 83 ಕೋಟಿ ರೂ.ಮೊತ್ತದ ಸಮವಸ್ತ್ರ ನೀಡಲು ಅನುಮೋದನೆ ನೀಡಲೂ ಸಹ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ವಿಶ್ವ ಬ್ಯಾಂಕ್ ಸಹಕಾರದಲ್ಲಿ ಅಣೆಕಟ್ಟೆ ಪುನರ್ವಸತಿ ಹಾಗೂ ಸುಧಾರಣಾ ಯೋಜನೆಗಾಗಿ 1,500 ಕೋಟಿ ರೂ. ಮೌಲ್ಯದ ಯೋಜನೆಗೂ ಸಮ್ಮತಿ ನೀಡಲಾಗಿದೆ.

ಸುಗ್ರೀವಾಜ್ಞೆ ಮೂಲಕ ತುರ್ತು ನಿಧಿಯ ಮೊತ್ತವನ್ನು 500 ಕೋಟಿ ರೂ.ಗಳಿಂದ 2,500 ಕೋಟಿ ರೂ.ಗಳಿಗೆ ಹೆಚ್ಚಿಸಲೂ ಸಹ ಸಂಪುಟ ಸಮ್ಮತಿಸಿದೆ.

# ಯೋಗದಿಂದ ರೋಗ ಮುಕ್ತ ಜೀವನ ಸಾಧ್ಯ



**ಜಿಲ್ಲಾ ಕಾಂಗ್ರೆಸ್‌ನ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಯೋಗಪಟು ನೀಲಪ್ಪ ಪ್ರತಿಪಾದನೆ**

ದಾವಣಗೆರೆ, ಜೂ. 21- ಯೋಗ ಮಾಡುವ ಮೂಲಕ ರೋಗ ಮುಕ್ತ ಜೀವನ ನಡೆಸಲು ಸಾಧ್ಯ ಎಂದು ನಗರದ ಹಿರಿಯ ಯೋಗ ಶಿಕ್ಷಕ ಬಿ.ಎಸ್. ನೀಲಪ್ಪ ಅವರ ಉದಾಹರಣೆಗಳ ಮೂಲಕ ಪ್ರತಿಪಾದಿಸಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಛೇರಿ - ಡಾ. ಶಾಮನೂರು ಶಿವಶಂಕರಪ್ಪ ಭವನದಲ್ಲಿ ಇಂದು ಏರ್ಪಡಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮನುಕುಲದ ಮಾನಸಿಕ-ದೈಹಿಕ ಸದೃಢತೆ ಗಾಗಿ ಹಿರಿಯರು ಕೊಟ್ಟು ಹೋಗಿರುವ ಯೋಗಕ್ಕೆ ಈಗ ವಿಶ್ವ ಮನ್ನಣೆ ದೊರೆತಿದೆ. ಏಕಾಗ್ರತೆ ಮತ್ತು ಬೆಳವಣಿಗೆಗೆ ಇದು ಹೆಚ್ಚು ಪರಿಣಾಮಕಾರಿ ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿ, ಯೋಗವು ಯಾವುದೇ ದೇಶ, ಜಾತಿ, ಧರ್ಮಕ್ಕೆ ಸೀಮಿತವಾದುದಲ್ಲ. ಇದು ಮನುಷ್ಯನ ಅಸ್ತಿತ್ವಕ್ಕೆ ಸೇರಿರುವಂಥದ್ದು. ಮನುಷ್ಯನನ್ನು ಉನ್ನತಿಗೆ ಕೊಂಡೊಯ್ಯಲು ನಮ್ಮ ಹಿರಿಯರು ಸಂಶೋಧಿಸಿದ ವಿಜ್ಞಾನವೇ ಯೋಗ. ಯೋಗ ಜಗತ್ತಿನ ಪ್ರತಿಯೊಬ್ಬರ ಜೀವನ ಶೈಲಿ ಆಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮಹಿಳಾ ಕಾಂಗ್ರೆಸ್‌ನ ದ್ರಾಕ್ಷಾಯಣಮ್ಮ, ರಾಜೇಶ್ವರಿ, ಸಿದ್ದೇಶ್ ಚಂದ್ರ, ಶ್ರೀಕಾಂತ್ ಬಗರೆ, ದಾದಾಪೀರ್, ಗಂಗಾಧರ್, ಗೋವಿಂದ ಹಾಲೇಕಲ್ಲು, ಸೊಸೈಟಿ ವೆಂಕಟೇಶ ನಾಯ್ಕ, ಅಲೆಕ್ಸಾಂಡರ್(ಜಾನ್), ಮೊಟ್ಟೆ ದಾದಾಪೀರ್ ಮತ್ತಿತರರಿದ್ದರು.

# ಅರಳಿಪುರದಲ್ಲಿ ಚಿರತೆ ಹೆಜ್ಜೆ ಗುರುತು



ಚನ್ನಗಿರಿ, ಜೂ.21- ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದ್ದು, ಕಣ್ಣಿಗೆ ಚಿರತೆ ಓಡಾಡಿದ ಹೆಜ್ಜೆ ಗುರುತು ಕಂಡಿರುವ ಕಾರಣ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಚನ್ನಗಿರಿ ತಾಲ್ಲೂಕಿನ ಅರಳಿಪುರ ಗ್ರಾಮದಲ್ಲಿ ಕಳೆದ ಎರಡು ದಿನಗಳ ಹಿಂದೆ ಚಿರತೆಯ ಹೆಜ್ಜೆ ಗುರುತು ಗ್ರಾಮಸ್ಥರಿಗೆ ಕಂಡು ಬಂದಿದೆ. ಇದರಿಂದ ಆತಂಕಗೊಂಡ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಚಿರತೆ ಓಡಾಡಿರುವ ಹೆಜ್ಜೆ ಗುರುತು ಕಂಡು ಬಂದಿದೆ.

ಗ್ರಾಮಸ್ಥರು ಹೇಳುವಂತೆ ಐದಾರು ಚಿರತೆ ಓಡಾಡಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ, ಅರಣ್ಯ ಇಲಾಖೆ ಸಿಬ್ಬಂದಿಗಳು ಗಮನಿಸಿದಂತೆ ಹೆಜ್ಜೆ ಗುರುತಿನ ಪ್ರಕಾರ, ಐದಾರು ಸಂಖ್ಯೆಯ ಚಿರತೆ ಇಲ್ಲ, ತಾಯಿ ಮತ್ತು ಮರಿ ಚಿರತೆಗಳು ಓಡಾಟ ಮಾಡುತ್ತಿವೆ ಎಂದಿದ್ದಾರೆ.

ಇತ್ತೀಚಿಗೆ ಬಸವಾಪಟ್ಟಣ ಬಳಿ ಚಿರತೆ ಓಡಾಡುತ್ತಿತ್ತು ಎಂದು ಗ್ರಾಮಸ್ಥರು ಹೇಳಿದ್ದರು. ಆದಾದ ನಂತರ ಅರಳಿಪುರ ಗ್ರಾಮದಲ್ಲಿ ಈಗ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದೆ. ಚಿರತೆ ಹೆಜ್ಜೆ ಗುರುತು ಕಾಣಿಸಿಕೊಂಡ ಬಳಿಕ ಗ್ರಾಮಸ್ಥರು ಭಯಗೊಂಡಿದ್ದಾರೆ.

ಈಗಾಗಲೇ ಕೃಷಿ ಚಟುವಟಿಕೆಗಳು ಆರಂಭಗೊಂಡಿದ್ದು, ರೈತರು ಕೃಷಿ ಕೆಲಸಗಳಿಗೆ ಜಮೀನುಗಳಿಗೆ ಹೋಗುವಾಗ ಒಬ್ಬರೇ ಓಡಾಡದೇ ಗುಂಪಾಗಿ ಹೋಗುವಂತೆ ಮುನ್ನೆಚ್ಚರಿಕೆ ನೀಡಿರುವುದಾಗಿ ಸೂಳೆಕೆರೆ ಶಾಖೆಯ ಉಪವಲಯ ಅರಣ್ಯಾಧಿಕಾರಿ ಮನೋಹರ್ ತಿಳಿಸಿದರು.

ಬಸವಾಪಟ್ಟಣ ಬಳಿ ಕಾಣಿಸಿಕೊಂಡ ಸ್ಥಳದಲ್ಲಿ ಕೋಳಿ ಮತ್ತು ದನದ ಮೂಳೆ ಇದ್ದದ್ದು ಕಂಡು ಬಂದಿತು. ಆಹಾರ ಅರಸಿ, ನೀರು ಕುಡಿಯಲು ಚಿರತೆ ಬಂದಿರಬಹುದು ಎಂದು ಅಂದಾಜಿಸಲಾಗಿದೆ ಎಂದು ಹೇಳಿದರು.

ಈ ವಿಚಾರವಾಗಿ ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ವಿಚಾರ ತರಲಾಗಿದೆ. ಈಗಾಗಲೇ ಚಿರತೆಗಳ ಸೆರೆಗಾಗಿ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಪತ್ತೆ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಮನೋಹರ ಮಾಹಿತಿ ನೀಡಿದರು.

# ರಕ್ತದಾನದಿಂದ ದೈಹಿಕ, ಮಾನಸಿಕ ದೃಢತೆ



ಚನ್ನಗಿರಿ, ಜೂ.21- ರಕ್ತದಾನ ಮಾಡುವುದರಿಂದ ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯ ಸದೃಢವಾಗಲಿದೆ. ಈ ನಿಟ್ಟಿನಲ್ಲಿ ಯುವಕರು ರಕ್ತದಾನ ಮಾಡಲು ಮುಂದಾಗಬೇಕೆಂದು ಜಿ.ಪಂ ಸದಸ್ಯ ಬಸವಂತಪ್ಪ ಕರೆ ನೀಡಿದರು.

ಬಸವಾಪಟ್ಟಣ ಗ್ರಾಮದ ಜನತಾ ವಿದ್ಯಾಲಯದಲ್ಲಿ ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ರಾಹುಲ್ ಗಾಂಧಿ ಮತ್ತು ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೊರೊನಾದ ಸಂದಿಗ್ಧ ಸಂದರ್ಭದಲ್ಲಿ ರೋಗಿಗಳಿಗೆ ರಕ್ತ ಅತ್ಯವಶ್ಯಕವಾಗಿದ್ದು, ರಕ್ತದ ಕೊರತೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಯುವಕರು ರಕ್ತದಾನ ಮಾಡುವ ಮೂಲಕ ಬಡ ರೋಗಿಗಳ ಬಾಳಿಗೆ ಬೆಳಕಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ನಾಗರಾಜ್ ಮಾತನಾಡಿದರು. ತಾ.ಪಂ ಸದಸ್ಯ ಜಿ.ಪಿ.ಪ್ರಕಾಶ್, ಯುವ ಕಾಂಗ್ರೆಸ್ ಅಧ್ಯಕ್ಷ ಓ.ಜಿ.ಕಿರಣ್, ಕಾಂಗ್ರೆಸ್ ಯುವ ಮುಖಂಡ ಜಿ.ಎಂ. ಗಂಗಾಧರ್, ಬಿ.ಜಿ.ಅಮಿತ್, ಎನ್‌ಎಸ್‌ಯುಐ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಡಿ.ಜಿ.ವಿನಾಯಕ, ಕಾಂಗ್ರೆಸ್ ಕಾರ್ಮಿಕ ವಿಭಾಗದ ಇ. ಮಂಜುನಾಥ್, ಯುವ ಮುಖಂಡ ಮಂಜುನಾಥ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಆಡಳಿತದಲ್ಲಿ ಸಿಎಂ ಪುತ್ರ ವಿಜಯೇಂದ್ರ ಹಸ್ತಕ್ಷೇಪ ಶುದ್ಧ ಸುಳ್ಳು

**ಸಂಸದ ಜಿ.ಎಂ.ಸಿದ್ದೇಶ್ವರ**

ದಾವಣಗೆರೆ, ಜೂ.21- ಭದ್ರಾ ಮೇಲ್ದಂಡೆ ಯೋಜನೆ ಟೆಂಡರ್‌ನಲ್ಲಿ ಕಿಕ್ ಬ್ಯಾಕ್ ಪಡೆಯಲಾಗಿದೆ ಎಂಬ ಆರೋಪ ಸರಿಯಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬುದು ಶುದ್ಧ ಸುಳ್ಳು. ಕೇವಲ ಆರೋಪ ಮಾಡಿದಾಕ್ಷಣ ಎಲ್ಲವೂ ಆಗದು. ಸಾಕ್ಷ್ಯ ಇರಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ವರದಿಗಾರರ ಕೂಟದ ಕಚೇರಿಯಲ್ಲಿ ಪತ್ರಿಕಾ ಏಜೆಂಟರು, ವಿತರಕರಿಗೆ ಇಂದು ಹಮ್ಮಿಕೊಂಡಿದ್ದ ಲಸಿಕಾ ಶಿಬಿರಕ್ಕೆ ಭೇಟಿ ನೀಡಿದ್ದ ವೇಳೆ ಮಾಧ್ಯಮದವರ ಜೊತೆ ಅವರು ಮಾತನಾಡಿದರು.

ಹೆಚ್. ವಿಶ್ವನಾಥ್, ಬಸನಗೌಡ ಪಾಟೀಲ್ ಯತ್ನಾಳ್ ಯಾಕೆ ಮಾತನಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತು. ವಿಶ್ವನಾಥ್‌ಗೆ ಬಿಜೆಪಿ ರಾಷ್ಟ್ರೀಯ ನಾಯಕರು ಹಾಗೂ ರಾಜ್ಯಾಧ್ಯಕ್ಷರು ಬುದ್ದಿ ಹೇಳುತ್ತಾರೆ. ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಆದ್ರೆ ವಿನಾಕಾರಣ ಆರೋಪ ಮಾಡುವುದು ಸರಿಯಲ್ಲ ಎಂದರು.

ಪದೇ ಪದೇ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡದಂತೆ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹಾಗೂ ಕೇಂದ್ರದ ನಾಯಕರು ಸೂಚನೆ ನೀಡಿದ್ದಾರೆ. ಈ ವಿಚಾರದಲ್ಲಿ ಮಾತನಾಡಲ್ಲ. ಯಡಿಯೂರಪ್ಪ ಅವರೇ ಇನ್ನು ಎರಡು ವರ್ಷ ಮುಖ್ಯಮಂತ್ರಿಯಾಗಿರಲಿದ್ದಾರೆ ಎಂದರು.

ಯಾರೋ ಇಬ್ಬರು ಮೂವರು ಯಡಿಯೂರಪ್ಪ ವಿರುದ್ಧ ಅಪಸ್ವರ ಎತ್ತಿರಬಹುದು. ಉಳಿದೆಲ್ಲಾ ಶಾಸಕರು ಸಿಎಂ ಪರವೇ ಇದ್ದಾರೆ. ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ಸಿದ್ದೇಶ್ವರ ಸ್ಪಷ್ಟಪಡಿಸಿದರು.

**ಡಿಸೆಂಬರ್ ಒಳಗೆ ಎಲ್ಲರಿಗೂ ಲಸಿಕೆ ಗುರಿ:** ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಳ್ಳಿ. ಕೆಲವರು ಅಪಪ್ರಚಾರ ನಡೆಸುತ್ತಿದ್ದಾರೆ. ಇದಕ್ಕೆ ಯಾರೂ ತಲೆಕೆಡಿಸಿಕೊಳ್ಳಬೇಡಿ. ಇಂದಿನಿಂದ ಎಲ್ಲರಿಗೂ ಲಸಿಕೆ ನೀಡಲಾಗುವುದು.

28 ಸಾವಿರ ಲಸಿಕೆಗಳು ಬಂದಿದ್ದು, ಕೊರತೆ ಇಲ್ಲ. ಡಿಸೆಂಬರ್ ಒಳಗೆ ಎಲ್ಲರಿಗೂ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, ಯಶಸ್ವಿಯಾಗುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

# ಆರು ಜಿಲ್ಲೆಗಳಲ್ಲಿ ನಿರ್ಬಂಧ ಇನ್ನಷ್ಟು ಸಡಿಲಿಸಿ ಆದೇಶ


ಬೆಂಗಳೂರು, ಜೂ. 21 - ಕೊರೊನಾ ಪ್ರಕರಣಗಳು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಆರು ಜಿಲ್ಲೆಗಳಲ್ಲಿ ನಿರ್ಬಂಧಗಳನ್ನು ಸಡಿಲಿಸಲಾಗಿದೆ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಉಡುಪಿ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ ಹಾಗೂ ವಿಜಯಪುರ ಜಿಲ್ಲೆಗಳನ್ನು ಒಂದನೇ ವರ್ಗದ ಜಿಲ್ಲೆಗಳ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಮೊದಲ ವರ್ಗದ ಜಿಲ್ಲೆಗಳಲ್ಲಿ ಅಂಗಡಿಗಳು ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ಕಾರ್ಯ ನಿರ್ವಹಿಸಬಹುದಾಗಿದೆ. ಈ ನಿರ್ಬಂಧ ಸಡಿಲಿಕೆ ಜುಲೈ 5 ಸರವರೆಗೆ ಜಾರಿಯಲ್ಲಿರಲಿದೆ.

# ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಲಸಿಕಾ ಶಿಬಿರ



ದಾವಣಗೆರೆ, ಜೂ.21- ದಾವಣಗೆರೆ - ಹರಿಹರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಏರ್ಪಾಡಾಗಿದ್ದ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಚಾಲನೆ ನೀಡಿದರು. ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ದಾವಣಗೆರೆ - ಹರಿಹರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ದಾವಣಗೆರೆ ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದ ಅಧ್ಯಕ್ಷ ರಮಣಲಾಲ್ ಸಂಘವಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಪಾಲಿಕೆ ಸದಸ್ಯ ಶಿವಾನಂದ್, ಪ್ರವೀಣಕುಮಾರ, ಪ್ರದೀಪ್, ದಾನಪ್ಪ, ಮಂಜುನಾಥ, ಕಿರಣ, ಪ್ರಶಾಂತ, ಡಿ.ಎಂ.ಕಾಂತರಾಜ, ಉಮೇಶ, ರವಿ ಮತ್ತಿತರರು ಉಪಸ್ಥಿತರಿದ್ದರು.

# ಸೋಮೇಶ್ವರ ವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ದಾವಣಗೆರೆ, ಜೂ.21- ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜಿಲ್ಲಾ ಬಿಜೆಪಿ ಉತ್ತರ ಮಂಡಲದಿಂದ ಸೋಮೇಶ್ವರ ವಿದ್ಯಾಲಯದ ಮಂಜೂಷ ಸಭಾಂಗಣದಲ್ಲಿ ಯೋಗ ಗುರು ಡಾ. ಸಿದ್ಧಯ್ಯ ಅವರ ನೇತೃತ್ವದಲ್ಲಿ ಯೋಗ ಅಭ್ಯಾಸ ಮಾಡುವ ಮೂಲಕ ಇಂದು ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ. ಹೆಚ್.ಶಿವಯೋಗಿಸ್ವಾಮಿ, ಬಿಜೆಪಿ ರಾಜ್ಯ ಶಿಕ್ಷಕರ ಪ್ರಕೋಷ್ಠಗಳ ಸಹ ಸಂಚಾಲಕರಾದ ಸುರೇಶ್ ಕುಮಾರ್, ಪಾಲಿಕೆ ಸದಸ್ಯ ಅಜಯ್ ಕುಮಾರ್, ಜಿಲ್ಲಾ ಬಿಜೆಪಿ ವಕ್ತಾರ ಶಿವಶಂಕರ್, ಬಿಜೆಪಿ ಉತ್ತರ ಮಂಡಲದ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ, ಪಾಲಿಕೆ ಸದಸ್ಯ ವೀರೇಶ್ ಪೈಲ್ವಾನ್, ಉತ್ತರ ಮಹಿಳಾ ಮೋರ್ಚಾ ಅಧ್ಯಕ್ಷರಾದ ಸರ್ವಮಂಗಳ, ಉತ್ತರ ಎಸ್ಸಿ ಮೋರ್ಚಾ ಅಧ್ಯಕ್ಷ ಶ್ರೀನಿವಾಸ್, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಶಿವು, ಪ್ರದೀಪ್, ಅನಿಲ್, ರಘು ತೊಗಟೆ ಇನ್ನಿತರರು ಉಪಸ್ಥಿತರಿದ್ದರು.

# 30 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ

**(1ನೇ ಪುಟದಿಂದ)** ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಿಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ, ಎಲ್ಲಾ ಮೂಲಸೌಕರ್ಯಗಳನ್ನು ಸರ್ಕಾರ ಒದಗಿಸಲಿದೆ. ಕೊರೊನಾ ಸಂಕಷ್ಟದಲ್ಲೂ ರೈತರಿಗೆ ಎಲ್ಲಾ ನೆರವನ್ನು ನೀಡುತ್ತಿದ್ದೇವೆ, ಮೇ ಅಂತ್ಯದ ವೇಳೆಗೆ ಸುಮಾರು 3.35 ಲಕ್ಷ ರೈತರಿಗೆ ಈಗಾಗಲೇ 2,550 ಕೋಟಿ ರೂ. ಸಾಲ ವಿತರಿಸಲಾಗಿದೆ ಎಂದರು. ಕಳೆದ ವರ್ಷ 25.67 ಲಕ್ಷ ರೈತರಿಗೆ 16,441 ಕೋಟಿ ರೂ. ಅಲ್ಪಾವಧಿ ಕೃಷಿ ಸಾಲ ವಿತರಿಸಲಾಗಿದೆ. ಈ ಬಾರಿ ಹೆಚ್ಚುವರಿ ಐದೂವರೆ ಲಕ್ಷ ರೈತರಿಗೆ ಸಾಲ ವಿತರಣೆ ಮಾಡಲಾಗುತ್ತಿದೆ.

ಕೊರೊನಾ ಸಂಕಷ್ಟಕ್ಕೆ ಸಿಲುಕಿದ ತೋಟಗಾರಿಕೆ ಬೆಳೆಗಾರರಿಗೆ ಈ ಬಾರಿಯೂ ಪರಿಹಾರ ಘೋಷಣೆ ಮಾಡಿ ಅವರ ಖಾತೆಗಳಿಗೆ ಹಣ ತಲುಪಿಸುವ ಕಾರ್ಯ ನಡೆದಿದೆ.

ಯಾರೇ ಟೀಕೆ-ಟಿಪ್ಪಣಿ ಮಾಡಲಿ ಅತ್ತ ಕಡೆ ಗಮನ ಹರಿಸದೆ ಕೋವಿಡ್ ಅನ್ನು ನಿಯಂತ್ರಣಕ್ಕೆ ತಂದು ಅಭಿವೃದ್ಧಿ ಕಾರ್ಯ ಮುಂದುವರೆಸುವುದಾಗಿ ತಿಳಿಸಿದರು.

> **"ರೈತರಿಗೆ ಆರ್ಥಿಕ ನೆರವು ಕಲ್ಪಿಸಲು ಶೂನ್ಯ ಬಡ್ಡಿ ದರದಲ್ಲಿ 19,370 ಕೋಟಿ ರೂ. ಅಲ್ಪಾವಧಿ ಬೆಳೆ ಸಾಲ ಮತ್ತು 0.6 ಲಕ್ಷ ರೈತರಿಗೆ ಶೇ. 3ರ ಬಡ್ಡಿ ದರದಲ್ಲಿ 1460 ಕೋಟಿ ರೂ., ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ವಿತರಣೆಯ ಗುರಿ ಹೊಂದಲಾಗಿದೆ.**
>
> **- ಬಿ.ಎಸ್. ಯಡಿಯೂರಪ್ಪ, ಸಿಎಂ**

# ನಿರಂತರವಾಗಿ ಯೋಗಾಭ್ಯಾಸಕ್ಕೆ ಕರೆ

**(1ನೇ ಪುಟದಿಂದ)** ದೇಶಗಳು ಇಂದು ಯೋಗ ದಿನಾಚರಣೆಯನ್ನು ಆಚರಿಸುತ್ತಿವೆ. ಇದು ನಮ್ಮ ದೇಶದ ಹಿರಿಮೆ ಎಂದು ತಿಳಿಸಿದರು.

ವೈದ್ಯಗುರು ಚನ್ನಬಸವಣ್ಣ ಮಾತನಾಡಿ, ಯೋಗವನ್ನು ಒಂದು ದಿನಕ್ಕೆ ಸೀಮಿತಗೊಳಿಸದೆ ನಿರಂತರವಾಗಿ ಅಭ್ಯಾಸ ಮಾಡುವುದರಿಂದ ಶ್ವಾಸಕೋಶದ ಶಕ್ತಿ ವೃದ್ಧಿಯಾಗುತ್ತದೆ ಹಾಗೂ ಕೊರೊನಾದಂತಹ ಸೋಂಕುಗಳ ವಿರುದ್ದ ಹೋರಾಡುವ ಸಾಮರ್ಥ್ಯ ಹೆಚ್ಚುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಯೋಗವನ್ನು ಮನೆಯಲ್ಲಿಯೇ ಆಚರಿಸಿ. ಯೋಗ ಮಾಡುವ ಮೂಲಕ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವನ್ನು ಸಹ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ್ ಸೇರಿದಂತೆ ಇತರೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಯೋಗಾಭ್ಯಾಸ ಮಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಪಾಲಿಕೆ ಮೇಯರ್ ಎಸ್.ಟಿ.ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ದೂಡಾ ಆಯುಕ್ತ ಬಿ.ಟಿ.ಕುಮಾರಸ್ವಾಮಿ, ತಹಶೀಲ್ದಾರ್ ಬಿ.ಎನ್. ಗಿರೀಶ್, ಸ್ಮಾರ್ಟ್ ಸಿಟಿ ಎಂಡಿ ರವೀಂದ್ರ ಮಲ್ಲಾಪುರ, ಡಿಹೆಚ್‌ಓ ಡಾ.ನಾಗರಾಜ್, ಆಯುಷ್ ಅಧಿಕಾರಿ ಡಾ.ಶಂಕರೇಗೌಡ, ಜಿಲ್ಲಾ ಯೋಗ ಒಕ್ಕೂಟದ ವಾಸುದೇವ ರಾಯ್ಕರ್, ಸಂಸದರ ಪತ್ನಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಪಾಲ್ಗೊಂಡಿದ್ದರು.

# ದಾವಣಗೆರೆಯಿಂದ 80 ಬಸ್ ಸಂಚಾರ

**(1ನೇ ಪುಟದಿಂದ)** ವಿವಿಧ ನಗರಗಳಿಗೆ ಬಸ್ ಸಂಚಾರ ಆರಂಭಿಸಲಾಗಿದೆ ಎಂದು ಹೇಳಿದರು.

ಪ್ರಯಾಣಿಕರ ಓಡಾಟ ಪೂರ್ತಿ ಪ್ರಮಾಣದಲ್ಲಿರಲಿಲ್ಲ. ಮಧ್ಯಾಹ್ನ 2.30 ರವರೆಗೆ ಮಾತ್ರ ಪ್ರಯಾಣಿಕರ ಓಡಾಟ ತುಸು ಹೆಚ್ಚಾಗಿತ್ತು. ಆದರೆ ನಂತರ ಕಡಿಮೆಯಾಗಿದೆ ಎಂದವರು ಹೇಳಿದರು.

ಲಾಕ್‌ಡೌನ್ ಪರಿಣಾಮ ಕಳೆದ 2 ತಿಂಗಳಿನಿಂದ ದಾವಣಗೆರೆ ವಿಭಾಗಕ್ಕೆ ಸುಮಾರು 24 ಕೋಟಿ ರೂ.ಗಳಷ್ಟು ನಷ್ಟ ಉಂಟಾಗಿದೆ ಎಂದು ಇದೇ ಸಂದರ್ಭದಲ್ಲಿ ಹೆಬ್ಬಾಳ್ ತಿಳಿಸಿದರು.

# ಜಿಲ್ಲಾ ಈಡಿಗ ಸಮಾಜದಿಂದ ಕಿಟ್



ದಾವಣಗೆರೆ, ಜೂ.21- ಕೊರೊನಾದಿಂದ ಸಂಕಷ್ಟಕ್ಕೀಡಾಗಿರುವ ಆರ್ಯ ಈಡಿಗ ಸಮಾಜದ ಆಯ್ದ ಬಡ ಕುಟುಂಬಗಳಿಗೆ ಜಿಲ್ಲಾ ಆರ್ಯ ಈಡಿಗ ಸಂಘದಿಂದ ಅಗತ್ಯ ವಸ್ತುಗಳನ್ನೊಳಗೊಂಡ ಆಹಾರದ ಕಿಟ್ಟುಗಳನ್ನು ಸಂಘದ ಕಚೇರಿ ಆವರಣದಲ್ಲಿ ಇಂದು ವಿತರಿಸಲಾಯಿತು. ಸಂಘದ ಜಿಲ್ಲಾ ಅಧ್ಯಕ್ಷ ಹೆಚ್. ಶಂಕರ್, ಕಾರ್ಯದರ್ಶಿ ಎ. ನಾಗರಾಜ್, ಖಜಾಂಚಿ ಇ.ದೇವೇಂದ್ರಪ್ಪ, ರಾಜಣ್ಣ, ರಾಮದಾಸ್, ಮಹಾಬಲ, ಮಹೇಶ್, ರಮೇಶ್ ಮುಂತಾದ ಸಮಾಜದ ಮುಖಂಡರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

# ಬಿಜೆಪಿ ಕಾರ್ಯಾಲಯದಲ್ಲಿ ಯೋಗ ದಿನ



ದಾವಣಗೆರೆ, ಜೂ. 21- ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ವಿಶ್ವ ಯೋಗ ದಿನ ಆಚರಿಸಲಾಯಿತು. ಪಕ್ಷದ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಜಿಲ್ಲಾ ಉಪಾಧ್ಯಕ್ಷರುಗಳಾದ ಶಿವರಾಜ್ ಪಟೇಲ್, ಮಂಜಾನಾಯ್ಕ್, ಶ್ರೀನಿವಾಸ್ ದಾಸಕರಿಯಪ್ಪ, ಮಹಿಳಾ ಮೋರ್ಚಾ ಅಧ್ಯಕ್ಷರಾದ ಮಂಜುಳಾ ಮಹೇಶ್, ಮಹಾ ಪೌರ ಎಸ್.ಟಿ. ವೀರೇಶ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮಾಜಿ ಶಾಸಕ ಎಂ. ಬಸವರಾಜನಾಯ್ಕ, ಪಾಲಿಕೆ ಮಾಜಿ ಮಹಾಪೌರರುಗಳಾದ ಎಂ.ಎಸ್. ವಿಠ್ಠಲ್, ವಸಂತ್, ಯುವ ಮೋರ್ಚಾ ಅಧ್ಯಕ್ಷ ಶಿವಪ್ರಕಾಶ್, ಕೋಶಾಧ್ಯಕ್ಷ ಬಾತಿ ವೀರೇಶ್, ಜಿಲ್ಲಾ ಮಾಧ್ಯಮ ಸಂಚಾಲಕ ಹೆಚ್.ಪಿ. ವಿಶ್ವಾಸ್, ಜಿಲ್ಲಾ ಕಾನೂನು ಪ್ರಕೋಷ್ಠದ ಪ್ರಮುಖ ರಾಘವೇಂದ್ರ, ದಿವಾಕರ್, ಪಕ್ಷದ ಮುಖಂಡರಾದ ಹೇಮಂತ್ ಕುಮಾರ್, ದೇವರಮನೆ ಶಿವಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಕೃಷ್ಣಕುಮಾರ್, ಜಿ.ವಿ. ಗಂಗಾಧರ್, ಬಸವರಾಜಯ್ಯ ಮತ್ತಿತರರು ಉಪಸ್ಥಿತರಿದ್ದರು.

# ಮತ್ತಿ - ಕುಕ್ಕುವಾಡ : ಭದ್ರಾ ನಾಲೆಗಳ ಸ್ವಚ್ಛತೆಗೆ ಪವಿತ್ರ ಚಾಲನೆ



ದಾವಣಗೆರೆ, ಜೂ.21- ಮತ್ತಿ ಹಾಗೂ ಕುಕ್ಕುವಾಡ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಭದ್ರಾ ನಾಲೆಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಇಂದು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಸ್ವಾತಂತ್ರ್ಯ ಭಾರತದ ಮಹತ್ವ ಪೂರ್ಣ ಯೋಜನೆಯಾಗಿದ್ದು, ಗ್ರಾಮೀಣ ಭಾಗವು ಮೂಲಭೂತ ಸೌಕರ್ಯದೊಂದಿಗೆ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಉದ್ಯೋಗ ಇಲ್ಲದೆ ಪರಿತಪಿಸುವ ಸಾಮಾನ್ಯರಿಗೆ, ವಿಶೇಷವಾಗಿ ರೈತರ ಹೊಲಗಳಿಗೆ ಹೋಗಲು ಅವಶ್ಯಕತೆ ಇರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 'ನಮ್ಮ ಹೊಲ, ನಮ್ಮ ರಸ್ತೆ' ಯೋಜನೆಯಡಿ ರಸ್ತೆಗಳನ್ನು ದುರಸ್ತಿ ಮಾಡಿಸುವುದು, ಮಣ್ಣಿನ ಕೊರೆತ ತಪ್ಪಿಸಲು ಕಲ್ಲುಕಟ್ಟಡ ನಿರ್ಮಾಣ ಮಾಡಲು, ಜಮೀನಿನ ಒಳಗೆ ಕಾಲುವೆಗಳನ್ನು ತೆಗೆಸಲು, ನಿಗದಿತ ಸಮುದಾಯಕ್ಕೆ ನೂತನ ತೋಟ ಕಟ್ಟಲು, ಸೋಪಾನ ಕಟ್ಟೆ ನಿರ್ಮಾಣ ಹಾಗೂ ಇನ್ನಿತರೆ ಹಲವಾರು ಪ್ರಮುಖ ಯೋಜನೆಗಳು ಜಾರಿಯಲ್ಲಿರಲಿವೆ ಎಂದು ತಿಳಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ತೇಜಸ್ವಿ ಪಟೇಲ್ ಮಾತನಾಡಿ, ಪ್ರಾರಂಭದ ದಿನಗಳಲ್ಲಿ ಅಧ್ಯಕ್ಷರ ಮಾತು ಅನನುಭವವಾದ ಹೇಳಿಕೆ ಎಂದು ನಂಬಿದ್ದ ನಾನು, ಅದನ್ನು ಸುಳ್ಳಾಗಿಸಿ ಮುಂಬರುವ ಅಧ್ಯಕ್ಷರಿಗೆ ಯಾವ ರೀತಿಯಲ್ಲಿ ಕೆಲಸ ಮಾಡಬೇಕು. ನೀರನ್ನು ಹೇಗೆ ಕೊನೆಯಂಚಿನ ರೈತರಿಗೆ ತಲುಪಿಸಬೇಕು. ಅಧಿಕಾರಿಗಳಿಂದ ಹೇಗೆ ಕೆಲಸ ತೆಗೆಸಿಕೊಳ್ಳಬೇಕು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಇದು ಎಲ್ಲರಿಗೂ ಮಾದರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಮಂಜುನಾಥ್, ದಿನೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ನಾರಾಯಣ ಸ್ವಾಮಿ, ಸಹಾಯಕ ಅಭಿಯಂತರ ಮಧು ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# 176 ಪಾಸಿಟಿವ್ 150 ಗುಣಮುಖ

**(1ನೇ ಪುಟದಿಂದ)**

ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 1702 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 501 ಜನರು ಮೃತಪಟ್ಟಿದ್ದಾರೆ.

**3 ಬ್ಲಾಕ್ ಫಂಗಸ್ ಪ್ರಕರಣ:** ಜಿಲ್ಲೆಯಲ್ಲಿ 3 ಬ್ಲಾಕ್ ಫಂಗಸ್ ಪ್ರಕರಣಗಳು ವರದಿಯಾಗಿವೆ. ಸಿ. ಜೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ವರೆಗೆ 94 ಪ್ರಕರಣಗಳು ಪತ್ತೆಯಾಗಿದ್ದು, 47ಸಕ್ರಿಯ ಪ್ರಕರಣಗಳಿವೆ.

# ತರಳಬಾಳು ಶ್ರೀಗಳ ಸೇವೆ ಅನನ್ಯ

## ಡಾ. ಎಸ್.ಎಂ. ಸಿದ್ದಲಿಂಗಪ್ಪ ಶ್ಲಾಘನೆ



ದಾವಣಗೆರೆ, ಜೂ.21- ಕೊರೊನಾದಿಂದ ಸಂಕಷ್ಟಕ್ಕೊಳಗಾಗಿರುವ ಬಡವರಿಗೆ ತರಳಬಾಳು ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ಕಾರ್ಯಕರ್ತರು ಒಂದುವರೆ ತಿಂಗಳಿಂದ ನಡೆಸುತ್ತಿರುವ ಅನ್ನ ದಾಸೋಹ ಸೇವೆ ಶ್ಲಾಘನೀಯವಾದದ್ದು ಎಂದು ಕಿವಿ, ಮೂಗು, ಗಂಟಲು ತಜ್ಞ ಡಾ. ಎಸ್.ಎಂ. ಸಿದ್ದಲಿಂಗಪ್ಪ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಉದಾರವಾಗಿ ನೆರವು ನೀಡುವುದರ ಮೂಲಕ ಇಂತಹ ಮಹತ್ಕಾರ್ಯಕ್ಕೆ ಪ್ರೋತ್ಸಾಹಿಸಿದರು.

# ಜಯವಿಭವ ವಿದ್ಯಾಸಂಸ್ಥೆಯಲ್ಲಿ ಯೋಗ ದಿನ

ದಾವಣಗೆರೆ, ಜೂ.21 - ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ವತಿಯಿಂದ ಆನ್‌ಲೈನ್ ನಲ್ಲಿ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಇಂದು ನಡೆಯಿತು. ಕಾರ್ಯಕ್ರಮದಲ್ಲಿ ಯೋಗದ ಉಗಮ, ಯೋಗದ ಮಹತ್ವ ಮತ್ತು ಯೋಗದ ವಿಧಗಳು ಇವುಗಳ ಬಗ್ಗೆ ದೈಹಿಕ ಶಿಕ್ಷಕ ಕೆ.ಹಾಲಪ್ಪ ತಿಳಿಸಿದರು.

ಯೋಗಾಸನಗಳ ಪ್ರದರ್ಶನವನ್ನು ಹತ್ತನೇ ತರಗತಿ ವಿದ್ಯಾರ್ಥಿ ಕು.ಸೋಮೇಶ್ವರ ಎಸ್. ಶೆಟ್ಟರ್ ನಡೆಸಿಕೊಟ್ಟರು. ಕೊರೊನಾ ಸಮಯದಲ್ಲಿ ಧ್ಯಾನ ಮತ್ತು ಅದರ ಮಹತ್ವವನ್ನು ಸಹ ಶಿಕ್ಷಕ ಕೆ.ಪಿ. ರುದ್ರೇಶಮೂರ್ತಿ ತಿಳಿಸಿದರು.

ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ಬಿ. ಶಾಂತಕುಮಾರಿ ಸ್ವಾಗತಿಸಿದರು, ಅಕ್ಕಮಹಾದೇವಿ ಪ್ರೌಢಶಾಲೆಯ ದೈಹಿಕ ಶಿಕ್ಷಕಿ ಶ್ರೀಮತಿ ಜ್ಯೋತಿ ನಿರೂಪಿಸಿದರು.

ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಸಹ ಶಿಕ್ಷಕ ಎಸ್.ವಿ. ನಾಗರಾಜ್ ನಿರೂಪಿಸಿದರು. ಕಾರ್ಯಕ್ರಮವು ಶ್ರೀ ಜಗದ್ಗುರು ಜಯ ವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ಅವರ ನೇತೃತ್ವದಲ್ಲಿ ಜರುಗಿತು.


**ಬೇಕಾಗಿದ್ದಾರೆ**

**ಮೊಹದ್ದೀಸ್ ಎ. ಅಜಮ್ ಮಿಷನ್**

**ಪ್ರಾಥಮಿಕ ಮತ್ತು ಪ್ರೌಢಶಾಲೆ, ದೇವರಹಟ್ಟಿ.**

**ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಉತ್ತಮವಾಗಿ ಬೋಧಿಸಲು**

1) BSc, BEd, DIPCMB, 2) B.A. B.Ed., ಇಂಗ್ಲಿಷ್, ಸಮಾಜ ವಿಜ್ಞಾನ, ಕನ್ನಡ ವಿಷಯ ಬೋಧಿಸಲು 3) D.Ed., B.A., - ಪದವಿ ಹೊಂದಿರುವ 4) ಕಂಪ್ಯೂಟರ್ ಬೋಧಿಸಲು ಮಹಿಳಾ ಶಿಕ್ಷಕಿಯರು ಬೇಕಾಗಿದ್ದಾರೆ. ಉತ್ತಮ ವೇತನ ಕೊಡಲಾಗುವುದು.

**ಕಾರ್ಯದರ್ಶಿಗಳು, ಎಂ.ಬಿ. ಸನಾವುಲ್ಲಾ, ಮೊ.: 94481 14657 95917 47214, 91 97401 12005, 91 99804 58578**

# ನ್ಯಾಯಾಧೀಶರು, ವಕೀಲರ ಮಧ್ಯೆ ಸಹಕಾರ ಅಗತ್ಯ

## ಹರಪನಹಳ್ಳಿ : ಬೀಳ್ಕೊಡುಗೆ ಸಮಾರಂಭದಲ್ಲಿ ನ್ಯಾಯಾಧೀಶರಾದ ಮಂಜುಳಾ ಉಂಡಿ ಶಿವಪ್ಪ



ಹರಪನಹಳ್ಳಿ, ಜೂ.21- ಕಾಲಮಿತಿಯಲ್ಲಿ ನ್ಯಾಯದಾನ ಆಗಬೇಕಾದರೆ, ನ್ಯಾಯಾಧೀಶರು ಮತ್ತು ನ್ಯಾಯವಾದಿಗಳ ಮಧ್ಯೆ ಪರಸ್ಪರ ಸಹಕಾರ ಅತ್ಯವಶ್ಯಕ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಂಜುಳಾ ಉಂಡಿ ಶಿವಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದಿಂದ ಹಮ್ಮಿಕೊಳ್ಳಲಾಗಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಅಷ್ಟೇ ಅಲ್ಲಾ ಸಂಸ್ಕೃತಿಯಲ್ಲೂ ಉತ್ತಮ ಹೆಸರಿರುವ ತಾಲ್ಲೂಕಾಗಿದೆ ಎಂದರೂ ತಪ್ಪಾಗಲಾರದು. ಇರುವಷ್ಟು ದಿನಗಳೂ ನಾನು ಉತ್ಸಾಹದಿಂದಲೇ ಕಾರ್ಯನಿರ್ವಹಿಸಿದ್ದೇನೆ. ಸಾರ್ವಜನಿಕರ ನಡುವೆಯೂ ಬಾಂಧವ್ಯ ಉತ್ತಮವಾಗಿತ್ತು. ಸುಶಿಕ್ಷಿತ ಜನರಿರುವ ಮಾದರಿಯ ತಾಲ್ಲೂಕಾಗಿದ್ದು ಈ ತಾಲ್ಲೂಕಿನಿಂದ ವರ್ಗಾವಣೆಯಾಗಿ ಹೋಗುತ್ತಿರುವುದು ಬೇಸರ ತಂದಿದೆ ಎಂದರು.

ವಕೀಲ ಕಣಿವಿಹಳ್ಳಿ ಮಂಜುನಾಥ್ ಮಾತನಾಡಿ, ರಸ್ತೆ ಮೇಲಿನ ಒಕ್ಕಲುತನಕ್ಕೆ ತಿಲಾಂಜಲಿ, ಹೆಲ್ಮೆಟ್ ವಿಚಾರವಾಗಿ ಬೀದಿಗಿಳಿದು ಸುರಕ್ಷತೆಯನ್ನು ಸಾರಿದ್ದ ನ್ಯಾಯಾಧೀಶರ ಕಾರ್ಯವೈಖರಿ ಎಲ್ಲರಿಗೂ ಮಾದರಿಯಾಗಿತ್ತು. ವಸತಿ ನಿಲಯಗಳಿಗೆ ತೆರಳಿ ಮಕ್ಕಳ ಕಷ್ಟ, ಸುಖಗಳನ್ನು ಹತ್ತಿರದಿಂದ ಗಮನಿಸಿ ಅವರಿಗೆ ಬೇಕಾದ ಸಹಾಯಕ್ಕೆ ಮುಂದಾಗಿದ್ದು, ಮಹಿಳೆಯರಿಗಿರಬೇಕಾದ ಸಹನೆ, ಕ್ಷಮಾಗುಣಗಳ ಜೊತೆಯಲ್ಲಿ ತಪ್ಪಿನ ವಿರುದ್ಧದ ಕಠೋರ ನಿಲುವುಗಳು ಇವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿದ್ದವು. ಸಾಹಿತ್ಯಾಭಿರುಚಿಯನ್ನು ಹೊಂದಿದ್ದ ಇಂತಹ ಗಟ್ಟಿತನದ ಮಹಿಳಾ ನ್ಯಾಯಾಧೀಶರನ್ನು ಬಿಟ್ಟುಕೊಡಲು ಮನಸ್ಸು ಒಪ್ಪುತ್ತಿಲ್ಲ. ಆದರೂ ಇವರ ಸೇವೆ ಹಲವೆಡೆ ಪಸರಿಸಲು ವರ್ಗಾವಣೆ ಅನಿವಾರ್ಯವಾಗಿದೆ ಎಂದರು.

ಬೀಳ್ಕೊಡುಗೆ ಸಮಾರಂಭದಲ್ಲಿ ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ್ರು, ವಕೀಲರ ಸಂಘದ ಅಧ್ಯಕ್ಷ ಜಿ. ಚಂದ್ರೇಗೌಡ್ರು, ಕಾರ್ಯದರ್ಶಿ ಬಸವರಾಜ್, ವಕೀಲರಾದ ಕೃಷ್ಣಮೂರ್ತಿ, ಎಂ. ಅಜ್ಜಣ್ಣ, ಕೆ. ಬಸವರಾಜ್, ಕೆ. ಜಗದಪ್ಪ, ಬಿ. ರೇವನಗೌಡ, ಕೋಡಿಹಳ್ಳಿ ಪ್ರಕಾಶ್,ಬಿ.ಎಂ. ಮೃತ್ಯುಂಜಯ್, ಗೋಣಿಬಸಪ್ಪ, ಜಿ.ಎಸ್. ತಿಪ್ಪೇಸ್ವಾಮಿ, ಶಾಂತನಾಯ್ಕ, ಬಾಗಳಿ ಮಂಜುನಾಥ್, ನಾಗರಾಜ್, ಮುತ್ತಿಗಿ ಮಂಜುನಾಥ್, ಹೆಚ್. ಹಾಲೇಶ್, ಬಿ.ಎಸ್. ಬಸವನಗೌಡ, ನಂದೀಶ್ ನಾಯ್ಕ, ಜಾಕೀರ್, ತಿರುಪತಿ, ದೇವರಾಜ್, ಬಿ. ಸಿದ್ದೇಶ್, ಹುಲಿಯಪ್ಪ, ಮುಜುಬುರ್ ರೆಹಮಾನ್, ನಾಗರಾಜ್ ನಾಯ್ಕ್, ಕೊಟ್ರೇಶ್ ಇನ್ನಿತರರಿದ್ದರು.

## ನಗರಕ್ಕಿಂದು ಮಹಿಳಾ-ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರಾದ ಶಶಿಕಲಾ ಅ. ಜೊಲ್ಲೆ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಸಚಿವರು ಚಿತ್ರದುರ್ಗದಿಂದ ಹೊರಟು ಮಧ್ಯಾಹ್ನ 2-30 ಗಂಟೆಗೆ ನಗರಕ್ಕೆ ಆಗಮಿಸುವರು. ಜಿಲ್ಲೆಯಲ್ಲಿ ಕೊರೊನಾ ಸಂಭಾವ್ಯ 3ನೇ ಅಲೆಯಿಂದ ಮಕ್ಕಳ ರಕ್ಷಣೆ ಹಾಗೂ ಆರೈಕೆಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸುವರು. ನಂತರ ಸಚಿವರು ಸಂಜೆ 5 ಗಂಟೆಗೆ ಹುಬ್ಬಳ್ಳಿಗೆ ತೆರಳುವರು.






## ಬಸವಣ್ಣನವರ ದೂರದೃಷ್ಟಿಯಿಂದ ಭಕ್ತಿಪಂಥವು ಭಕ್ತಿ ಪಥವಾಯಿತು



ಚಿತ್ರದುರ್ಗ, ಜೂ. 21-ಬಸವಾದಿ ಶರಣರಿಗೆ ಮೊದಲು ಭಕ್ತಿ ಪಂಥ ಇತ್ತು. ಬಸವಣ್ಣನವರ ದೂರದೃಷ್ಟಿಯಿಂದ ಭಕ್ತಿಪಂಥವು ಭಕ್ತಿ ಪಥವಾಯಿತು. ಭಕ್ತಿ ಬದುಕಿಗೆ ಆಧಾರ. ಅದು ಶಿವಶರಣರ ಆಹಾರವೂ ಕೂಡ. ಇದನ್ನು ಶ್ರದ್ಧೆ, ವಿಶ್ವಾಸ, ವಿನಯ, ಸತ್ಯಸಂಧತೆ ಹಿನ್ನೆಲೆಯಲ್ಲಿ ನೋಡಬಹುದು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬಸವ ಕೇಂದ್ರ - ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗು ವಿಎಸ್‌ಎನ್‌ಎ ವಿಚಾರ ವೇದಿಕೆ (ಉತ್ತರ ಅಮೆರಿಕ) ಇವರ ಸಂಯುಕ್ತಾಶ್ರಯದಲ್ಲಿ ಇಂದು ನಡೆದ ವಚನಕಾರ್ತಿ, ಭಕ್ತಿ, ಯುಕ್ತಿ, ಮುಕ್ತಿಯ ಶಕ್ತಿ ವಿಚಾರ ಕುರಿತು ಆನ್‌ಲೈನ್ ಮೂಲಕ ಶರಣರು ಚಿಂತನ ನಡೆಸಿದರು.

ಭಾರತೀಯ ಸಂಸ್ಕತಿಯೊಳಗೆ ಒಂದು ವಚನ ಸಂಸ್ಕೃತಿ, ಬಸವ ಸಂಸ್ಕೃತಿ ಇದೆ. 12ನೇ ಶತಮಾನದ ಮಹಾನ್ ಸಾಧಕರಾದ ಮುಕ್ತಾಯಕ್ಕ, ಮೋಳಿಗೆ ಮಹಾದೇವಿ ನಾವು ಜಂಗಮ ಸೇವೆ ಮಾಡಬೇಕು ಎಂದಿದ್ದಾರೆ. ಸತ್ಯಕ್ಕ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಕೂಡ ಉತ್ತಮ ವಿಚಾರಗಳನ್ನು ಕಟ್ಟಿಕೊಡುತ್ತಾಳೆ. ಬಸವ ಸಿದ್ಧಾಂತವು ಆದರ್ಶ ಜೀವನ ನಡೆಸಿದ ಉಜ್ವಲ ಉದಾಹರಣೆ ಇದೆ ಎಂದು ಶರಣರು ತಿಳಿಸಿದರು.

ವಿಎಸ್‌ಎನ್‌ಎ ಅಧ್ಯಕ್ಷ ಹರೀಶ್ ಹಿರೇಮಠ, ಗದಿಗೆಪ್ಪ ದೊಡ್ಡಮನಿ, ಸುರೇಶ್ ಶ್ರಾಫ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಚನ್ನಬಸಪ್ಪ ವಚನ ಪ್ರಾರ್ಥನೆ ಮಾಡಿದರು.

## ಮಾಸ್ಕ್ ಧರಿಸದ 402 ಮಂದಿಗೆ ದಂಡ : 139 ವಾಹನಗಳು ಸೀಜ್

ದಾವಣಗೆರೆ, ಜೂ.21- ಮಾಸ್ಕ್ ಧರಿಸದಿದ್ದವರಿಗೆ ದಂಡದ ಬಿಸಿ, ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳನ್ನು ವಶಕ್ಕೆ ಪಡೆಯುವ ಕಾರ್ಯಾಚರಣೆ ಇಂದು ಸಹ ನಡೆಯಿತು. ಜಿಲ್ಲೆಯಲ್ಲಿ ಮಾಸ್ಕ್ ಧರಿಸದ 402 ಮಂದಿಯಿಂದ ಒಟ್ಟು 79,800 ರೂ. ದಂಡ ವಿಧಿಸಲಾಗಿದೆ. ಅನಾವಶ್ಯಕವಾಗಿ ರಸ್ತೆಗಿಳಿದ 139 ವಾಹನಗಳನ್ನು ಸೀಜ್ ಮಾಡಲಾಗಿದೆ.






## ಕೊರೊನಾ ಲಾಕ್‌ಡೌನ್ ವೇಳೆ ಅಬಕಾರಿಗೆ ಶೇ.10 ಹೆಚ್ಚು ಆದಾಯ


ಬೆಂಗಳೂರು, ಜೂ.21 - ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಅಬಕಾರಿ ಇಲಾಖೆ ಸಾಮಾನ್ಯ ದಿನಗಳಿಗಿಂತ ಶೇ.10 ರಷ್ಟು ಹೆಚ್ಚುವರಿ ಆದಾಯ ಗಳಿಸಿದೆ ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ತಿಳಿಸಿದ್ದಾರೆ.

18 ರಿಂದ 44 ವಯಸ್ಸಿನವರಿಗೆ 3 ದಿನಗಳ ಕೋವಿಡ್ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೋವಿಡ್ ಲಾಕ್‌ಡೌನ್‌ನಲ್ಲಿ ಅಂದರೆ, ಏಪ್ರಿಲ್ 1 ರಿಂದ ಜೂನ್ 15 ರವರೆಗೆ ಅಬಕಾರಿ ಇಲಾಖೆಗೆ 4,500 ಕೋಟಿ ರೂ. ವರಮಾನ ಬಂದಿದೆ, ಸಾಮಾನ್ಯ ದಿನಗಳಿಗಿಂತ ಶೇ. 10 ರಷ್ಟು ಹೆಚ್ಚು ಲಾಭ ಬಂದಂತಾಗಿದೆ ಎಂದು ಮಾಹಿತಿ ನೀಡಿದರು.

## ಜಿಲ್ಲೆಯಲ್ಲಿ 27 ಸಾವಿರ ಜನರಿಗೆ ಲಸಿಕೆ

ದಾವಣಗೆರೆ, ಜೂ. 21 – ದಾವಣಗೆರೆ ಜಿಲ್ಲೆಯಲ್ಲಿ ಸೋಮವಾರ ಒಂದೇ ದಿನ 27,283 ಜನರಿಗೆ ಲಸಿಕೆ ನೀಡಲಾಗಿದೆ ಎಂದು ಜಿಲ್ಲಾಡಳಿತದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಇದುವರೆಗೂ ಜಿಲ್ಲೆಯಲ್ಲಿ 4.43 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ.

18ರಿಂದ 44ರ ವಯೋಮಾನದವರ ಪೈಕಿ 12,151 ಜನರು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. 45ರಿಂದ 59ರ ವಯೋಮಾನದ 8,651 ಜನರು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. 60 ವರ್ಷ ಮೀರಿದವರಲ್ಲಿ 2,774 ಜನರು ಮೊದಲ ಹಾಗೂ 1,254 ಜನರು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte